# ನಮ್ಮ ಜನ
# NAMMA JANA

ಸಂಪಾದಕರು: ದರ್ಶನ್.ಟಿ
Editor : DARSHAN.T

ಕನ್ನಡ ದಿನ ಪತ್ರಿಕೆ
Kannada Daily

ಸಂಪುಟ – 01 ಸಂಚಿಕೆ – 259 | ಶೀರ್ಷಿಕೆ ಕೋಡ್: ಕೆಎಆರ್ ಕೆಎಎನ್ 28269 | ಚಿತ್ರದುರ್ಗ | ದಿನಾಂಕ: 04–05–2024 ಶನಿವಾರ | ಪುಟ: 4 | ಬೆಲೆ : ರೂ.2–00

Volume - 01 Issue - 259 | Title- Code: KARKAN 28269 | Chitradurga | Date: 04-05-2024 Saturday | Page: 4 | Price: Rs. 2-00



ಒಳಪುಟದ ಸುದ್ದಿಗಳು

ಮಲೇರಿಯಾ ನಿವಾರಣೆ ಎಲ್ಲರ ಸಹಭಾಗಿತ್ವದಿಂದ ಸಾಧ್ಯ 2

ಕೆಎಸ್ಆರ್ಟಿಸಿ ಚಾಲಕ ಮುಂಜಾಗ್ರತೆ: ಬೈಕ್ ಸವಾರ ಹಾಗೂ ಪ್ರಯಾಣಿಕರ ರಕ್ಷಣೆ 3

ಮಗನಿಗೆ ತಂದೆಯೊಬ್ಬನ ಬುದ್ಧಿ ಮಾತುಗಳು........ 4



ಸುದ್ದಿ, ಜಾಹಿರಾತಿಗೆ 9686622252


## ಶುಭ ನುಡಿ

ಬಟ್ಟೆ ನೋಡಿ ಗೆಳೆತನ ಮಾಡಬೇಡ,
ಗುಣ ನೋಡಿ ಗೆಳೆತನ ಮಾಡು ,
ಯಾಕೆಂದರೆ ಬಟ್ಟೆ ಹರಿದು ಹೋಗುವ
ತನಕ ಮಾತ್ರ ಇರುತ್ತದೆ, ಗುಣ
ಸಾಯುವವರೆಗೂ ಇರುತ್ತದೆ !!

» ಶುಭೋದಯ

# ನೆತ್ತಿ ಸುಡುವಷ್ಟು ಬಿಸಿಲಿದೆಯೋ ಹೊರತು
## ಭೂಮಿ ತಂಪಾಗುವಷ್ಟೂ ಸಹಾ ಮಳೆ ಬರಲೇ ಇಲ್ಲಾ...

» ನಾಗತಿಹಳ್ಳಿಮಂಜುನಾಥ್



ಹೊಸದುರ್ಗ: ಯುಗಾದಿಗೆ ಮಳೆ ಬರಬಹುದು ಹಾಗಲಾದರೂ ನಮ್ಮ ಬದುಕು ಹಸನಾಗಬಹುದು,ಮಳೆ ಬಂದರೆ ಒಣಗಿ ಹೋಗುತ್ತಿರುವ ಅಡಿಕೆ,ತೆಂಗು,ಬಾಳೆ ಇವುಗಳಿಗೆ ಜೀವಕಳೆ ಬರಬಹುದು,ಮಳೆ ಬಂದರೆ ಕುಡಿಯುವ ನೀರಿಗೆ,ತೋಟಗಳಿಗೆ ಧನಕರುಗಳಿಗೆ ಕುಡಿಯಲು ನೀರಾಗಬಹುದು ಎಂಬ ನಿರೀಕ್ಷೆ ಹಾಗೂ ಭರವಸೆ ತಾಲೂಕಿನ ರೈತಾಪಿ ವರ್ಗದವರಲ್ಲಿ ಹಾಗೂ ಜನಸಾಮಾನ್ಯರಲ್ಲಿ ಆಶಾ ಭಾವನೆ ಮೂಡಿತ್ತು ಆದರೆ ಯುಗಾದಿಮ ಕಳೆದು ಈಗ ಬಸವ ಜಯಂತಿಯೂ ಸಹಾ ಸಮೀಪಿಸುತ್ತಿದೆ ಆದರೂ ತಾಲೂಕಿನ ಯಾವ ಮೂಲೆಯಲ್ಲೂ ಸಹಾ ಒಂದು ಹನಿ ಮಳೆ ಬರಲಿಲ್ಲ.

ಹಿಂದೆಂದೂ ಸಹಾ ಅಂದರೆ ಹಿರಿಯರು ಹೇಳುವ ಪ್ರಕಾರ ಕಳೆದ ಸುಮಾರು 80 ವರ್ಷಗಳ ಹಿಂದಿನಿಂದಲೂ ಸಹಾ ಕಂಡರಿಯದಷ್ಟು ಬಿಸಿಲು ಭಾದಿಸುತ್ತಿದೆ ಹಾಗೆಯೆ ಮಳೆಯೂ ಸಹಾ ಸುಧೀರ್ಘವಾಗಿ ಕೈಚಲ್ಲಿದೆ.ಇದರಿಂದ ರೈತರ ಜೀವನವಂತೂ ಹೈರಾಣವಾಗಿ ಬಿಟ್ಟಿದೆ.ತಾಲೂಕಿನಲ್ಲಿ ಶೇ.75 ರಷ್ಟು ಬೋರ್‌ವೆಲ್‌ಗಳು ಕೈಕೊಟ್ಟಿವೆ,ತಾಲೂಕಿನ ಎಲ್ಲಾ ಕೆರೆ ಕಟ್ಟೆಗಳು ಬತ್ತಿ ಹೋಗಿವೆ,ತಾಲೂಕಿನ ಜೀವನದಿಯಾದ ಕೆಲ್ಲೋಡು ವೇದಾವತಿ ನದಿಯೂ ಸಹಾ ಬತ್ತಿ ಹೋಗಿದೆ, ಸಕಲ ಬೆಳೆಗಳು ನೀರಿಲ್ಲದೆ ಸಂಪೂರ್ಣವಾಗಿ ನೆಲ ಕಚ್ಚಿವೆ,ಅಡಿಕೆ,ತೆಂಗು,ಬಾಳೆ ಕಾಪಾಡಿಕೊಳ್ಳಲು ಶೇ.90 ರಷ್ಟು ರೈತರು ಟ್ಯಾಂಕರ್ ನಿಂದ ಹಾಗೂ ಎತ್ತಿನ ಗಾಡಿಯಲ್ಲಿ ನೀರು ತುಂಬಿಕೊಂಡು ಬೆಳೆಗಳಿಗೆ ನೀರು ಹಾಯಿಸುತ್ತಿದ್ದಾರೆ.







ಮಳೆ ಕೈಕೊಟ್ಟಿರುವುದರಿಂದ ಕಂಗಾಲಾಗಿರುವ ಪರುಸ್ಥಿತಿ ಅನ್ನದಾನಿಗೆ ಎದುರಾಗಿದೆ. ಹೊಲ ಗದ್ದೆಗಳು ಬೀಳುಬಿದ್ದಿವೆ, ಮಳೆ ಬಾರದ ಕಾರಣ ಕೃಷಿ ಉಪಕರಣಗಳು ಹಟ್ಟಸೇರಿವೆ,ತಾಲೂಕಿನಲ್ಲಿ ಮಳೆ ಆಶ್ರಿತ ರೈತರೇ ಹೆಚ್ಚಾಗಿದ್ದಾರೆ, ಇಲ್ಲಿ ನೀರಾವರಿ ಸೌಲಭ್ಯಗಳು ವಿರಳ,ಅಪ್ಪರ್ ಭದ್ರಾಯೋಜನೆ ಇಲ್ಲಿನ ಜನರಿಗೆ ಇನ್ನೂ ಕನ್ನಡಿಯೊಳಗಿನ ಕಗ್ಗಂಟಾಗಿದೆ,

ಈ ವೇಳೆಗಾಗಲೆ ತೋಟ,ಹೊಲಗಳಲ್ಲಿ ಬೆಳೆದು ನಿಂತ ಹಸಿರು ಬಣ್ಣ ಬೆಳೆದು ಮೈದುಂಬಿ ಕಂಗೊಳಿಸಬೇಕಿತ್ತು, ಆದರೆ ಈಗ ಕಾಣುತ್ತಿರುವುದು ಒಣ ಭೂಮಿ ಮಾತ್ರ.ಕೆರೆ,ಕಟ್ಟೆಭಾವಿಗಳು ಮಂದಗತಿಯಲ್ಲಿ ಬರಿದಾಗುತ್ತಿವೆ, ಮಳೆ ಬಾರದ ಇರುವ ಕಾರಣ ಕುಡಿಯುವ ನೀರಿಗೂ ಭೀಕರ ಸಮಸ್ಯೆ ಎದುರಾಗಿದೆ.

ಹೊಸದುರ್ಗ ಪಟ್ಟಣದಲ್ಲಿ ಕುಡಿಯುವ ನೀರಿನ ಸಮಸ್ಯೆ ಅಷ್ಟೊಂದು ಕಾಣುತ್ತಿಲ್ಲ. ಕುಡಿಯುವ ನೀರಿಗಾಗಿ ಈಗಾಲಗಲೆ ಪ್ರತಿ ಬಡಾವಣೆಗಳಿಗೂ ಸಹಾ ಟ್ಯಾಂಕರ್ ಮೂಲಕ ನೀರು ಹಾಯುಸುತ್ತಿದ್ದಾರೆ. ಆದರೆ ತಾಲೂಕಿನ

ಗ್ರಾಮಾಂತರ ಪ್ರದೇಶಗಳಲ್ಲಿ ನೀರಿನ ಹಾಹಾಕಾರ ಮಾತ್ರ ತಾರಕಕ್ಕೇರಿದೆ.

ಮಳೆ ಕೊರತೆಯಿಂದ ಅಂತರ್ಜಲ ಕುಸಿಯುತ್ತಿದೆ, ಕೊಳವೆ ಭಾವಿಗಳು ಭತ್ತುತ್ತಿವೆ,ಈ ಸಮಯದಲ್ಲಿ ಭೂಮಿಯ ಮೇಲ್ಮಟ್ಟಕ್ಕಿರಬೇಕಾದ ನೀರು ಪಾತಾಳ ಸೇರುತ್ತಿದೆ, ಈ ಬಿರು ಬಿಸಿಲಿನಿಂದ ಮನುಷ್ಯ ಸೇರಿದಂತೆ ಪ್ರಾಣಿ ಪಕ್ಷಿಗಳೂ ಕೂಡ ನೀರು ಕಾಣದೆ ಕಂಗಾಲಾಗುತ್ತವೆ, ಮಳೆಯ ಹಿನ್ನಡೆಯಿಂದ ಜಾನುವಾರುಗಳ ಮೇವಿಗೂ ಅಭಾವ ಉಂಟಾಗಿದೆ,ಪರುಸ್ಥಿತಿ ಈಗೆಯೇ ಮುಂದುವರೆದರೆ ಪಕ್ಷಿ ಸಂಕುಲಗಳು ವಿನಾಶದತ್ತ ಸಾಗುತ್ತವೆ ಎಂಬದೇ ವಿಷಾದದ ಸಂಗತಿಯಾದರೆ ಮಳೆಯ ಅಭಾವದಿಂದ ಜನರು ಮುಂದಿನ ದಿನಗಳಲ್ಲಿ ಅನೇಕ ರೀತಿಯ ಭಾರಿ



ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ, ಜನರ ಬದುಕಿಗೆ ಮಳೆ ಅತ್ಯವಶ್ಯಕ ಎಂಬುದನ್ನ ಎಲ್ಲರೂ ಸಹಾ ಅರ್ಥ ಮಾಡಿಕೊಳ್ಳಬೇಕಾಗಿರುವುದು ನೈಜ ಸಂಗತಿ.

ಜೂನ್ ತಿಂಗಳ ಮುಂಗಾರು ಮಳೆ ಆರಂಭಕ್ಕೂ ಮುನ್ನ ಕಳೆದ ವರ್ಷಕ್ಕಿಂತ ಈ ಬಾರಿಯ ಬಿಸಿಲು ಮತ್ತು ಉಷ್ಣಾಂಶಕ್ಕೆ ತತ್ತರಿಸಿದ ಜನತೆ ವರುಣ ದೇವನಲ್ಲಿ ಮೊರೆ ಇಟ್ಟುರೂ ಸಹಾ ಫಲ ಮಾತ್ರ ಸಿಗುತ್ತಿಲ್ಲ,

ತಾಲೂಕಿನಲ್ಲಿ ಕಳೆದ ಮೂರು ನಾಲ್ಕು ದಿನಗಳಿಂದ ಉಷ್ಣತೆ ಪ್ರಮಾಣ ಹೆಚ್ಚಿದ್ದು ಮಧ್ಯಾಹ್ನದ ಸಮಯಕ್ಕೆ 38 ರಿಂದ 41 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದ್ದು ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲೋಕುಗಳಿಗೆ ಮೇ 4 ರವರೆಗೆ ಹವಾಮಾನ ಇಲಾಖೆ ಆರೇಂಜ್ ಅಲರ್ಟ್ ನೀಡಿ ಎಚ್ಚರಿಕೆ ನೀಡಿದೆ.

ಮುಂಜಾನೆ ಎಂಟು ಗಂಟೆಯ ಸಮಯದೊತ್ತಿಗೆ ವಾತಾವರಣದಲ್ಲಿ ಗಾಳಿಯ ಪ್ರಮಾಣ ಕಡಿಮೆಯಾಗುತ್ತಿದ್ದಂತೆ ಬಿಸಿಲಿನ ಪ್ರಮಾಣ ಹೆಚ್ಚಾಗುತ್ತಿದ್ದು ರೈತರು ಕೂಲಿ ಕಾರ್ಮಿಕರು,ಬೀದಿಬದಿ ವ್ಯಾಪಾರಿಗಳು,ವೃದ್ಧರು ಚಿಕ್ಕ ಮಕ್ಕಳು ಬೆಳಿಗ್ಗೆ 8 ರಿಂದ ಮಧ್ಯಾಹ್ನ 4 ರಿಂದ 5 ಗಂಟೆಯವರೆಗೂ ಸಹಾ ಇರುವ ಬಿಸಿಲಿಗೆ ಹೈರಾಣಾಗಿ ಸಾಕು ಸಾಕೆನ್ನುವಷ್ಟು ಸುಸ್ತಾಗಿಹೋಗುತ್ತಿದ್ದಾರೆ.

ಇನ್ನು ಮನೆತನದ ನೀರಿನ ವಿಚಾರಕ್ಕೆ ಬಂದರೆ ಪರುಸ್ಥಿತಿ ಹೇಳತೀರದು ನೀರಿನ ಅಭಾವದಿಂದ ಮನೆಯಿಂದ ಸಾಕಷ್ಟು ದೂರ ಹೋಗಿ ನೀರು ತರಬೇಕಿದೆ ಬೈಕಿನಲ್ಲಿ,ಕಾರಿನಲ್ಲಿ ಆಟೋಗಳಲ್ಲಿ ತಳ್ಳುವ ಗಾಡಿಗಳಲ್ಲಿ ಅವರವರ ಅನುಕೂಲಕರವಾದ ವಾಹನಗಳಲ್ಲಿ ಸಾಲದೆಂಬಂತೆ ಎತ್ತಿನ ಬಂಡಿಗಳಲ್ಲಿ ನೀರು ಸಾಗಿಸುವ ಕಾರ್ಯ ನಡೆಯುತ್ತಲೇ ಇದೆ.

ಅನೇಕ ನಾಗರೀಕರು 600 ರೂಗಳಿಂದ 800 ರೂ ಹಣಕೊಟ್ಟು ಖಾಸಗಿ ಟ್ಯಾಂಕರ್‌ಗಳಿಂದ ನೀರು ಖರೀದಿಸುತ್ತಿದ್ದಾರೆ ವಿವಾಹ ಗೃಹ ಪ್ರವೇಶ ಉಪನಯನ ಭರಾಟೆಯ ಈ ದಿನದಲ್ಲಿ ನೀರು ಬಂಗಾರ ಬೆಲೆಯುಳ್ಳ ವಸ್ತುವಾಗಿದೆ.

ತಾಲೂಕಿನ ಶೇ.75 ರಷ್ಟು ಅಡಿಕೆ ತೆಂಗು.ಬಾಳೆ ಹಾಕಿರುವ ರೈತರು ಬಿರು ಬೇಸಿಗೆಯ ಅವಾಂತರಕ್ಕೆ ಸಿಗಲಾರದ ನೀರಿಗಾಗಿ ತತ್ತರಿಸಿ ಹೋಗಿದ್ದಾರೆ. ಶೇ.50 ರಷ್ಟು ಅಡಿಕೆ ಬೇಳೆಗಾರರು ತಮ್ಮ ಗಿಡಗಳನ್ನ ಉಳಿಸಿಕೊಳ್ಳುವ ಸಲುವಾಗಿ ಸಾಕಷ್ಟು ಹಣವನ್ನ ತೆತ್ತು ಟ್ಯಾಂಕರ್ ಮೂಲಕ ಗಿಡಗಳಿಗೆ ನೀರು ಹಾಯಿಸುತ್ತಿರುವುದು ಸರ್ವೆ ಸಾಮಾನ್ಯವಾಗಿದೆ.

ಬಹಳಷ್ಟು ಅಡಿಕೆ ತೋಟಗಳು ನೀರಿಲ್ಲದೆ ಒಣಗಿ ಕರಕಲಾಗಿವೆ ಇನ್ನು ತೆಂಗಿನ ತೋಟದಲ್ಲಿ ಮರಗಳು ಬರುಡಾಗಿ ನಿಂತಿವೆ.

2019–2020 ಹಾಗೂ 2021 ರ ನವಂಬರ್ ನವರೆಗೂ ಸಹಾ ಮಳೆ ಇತ್ತು ಅದರೆ 2022–2023 ಈ ವರ್ಷಗಳಲ್ಲಿ ತಾಲೂಕಿಗೆ ಒಂದು ಹನಿ ಮಳೆಯೂ ಸಹಾ ಬಂದಿಲ್ಲ ಇದರ ನಡುವೆ ಜನ ಜಾನುವಾರ ರೈತರ ಗೋಳಾಟ ಹೇಳತೀರದಾಗಿದೆ. ಅಡಿಕೆ ಮತ್ತಿತರೆ ಬೆಳೆಗಳನ್ನ ಹಾಕಿದ ರೈತರು ಮಳೆ ಇಲ್ಲದ್ದು ಒಂದು ಕಡೆ ಜೋತೆಗೆ ಇದಕ್ಕೆ ಪುಷ್ಟಿ ನೀಡುವಂತೆ ಭಯಾನಕ ಬಿಸಿಲು ಇವುಗಳಿಂದ ಈ ರೈತ ತತ್ತರಿಸಿ ಹೋಗಿದ್ದಾನೆ.

ಕಳೆದ ಎರಡು ವರ್ಷಗಳ ಹಿಂದೆ ನಂವಂಬರ್ ಮತ್ತು ಡಿಸೆಂಬರ್ ತಿಂಗಳಲ್ಲಿ ವಿಶಾಕ ಮಳೆ ಬಂದದ್ದು ಬಿಟ್ಟರೆ ತದ ನಂತರ ಬರಬೇಕಾಗಿದ್ದ ಅಶ್ವಿನಿ ಮತ್ತು ಅನರಾಥ ಈ ಎರಡು ಮಳೆಗಳು ಸಂಪೂರ್ಣವಾಗಿ ಕೈ ಕೊಟ್ಟಿವೆ.ಈ ಮತ್ತೆ 2024 ಮಾರ್ಚ್ ತಿಂಗಳಲ್ಲಿ ಅಶ್ವಿನಿ ಮಳೆ ಬರುವ ನಿರೀಕ್ಷೆ ಇತ್ತು ಆದರೆ ಈಗಿರುವ ಬಿಸಿಲಿ ವಾತಾವರಣ ನೋಡಿದರೆ ಅಶ್ವಿನಿ ಮಳೆ ಎಲ್ಲಿ ಕೈಕೊಡುತ್ತದೋ ಎಂಬ ಭೀತಿ ಶುರುವಾಗಿದೆ.ಈಗಾಗಲೆ ಸಾಕಷ್ಟು ಜನರು ಟ್ಯಾಂಕರ್ ಮೂಲಕ ನೀರನ್ನು ಖರೀದಿಸುತ್ತಿದ್ದಾರೆ, ಎರಡು ವರ್ಷದಲ್ಲಿ ನಿರೀಕ್ಷೆಯಂತೆ ಬರಬೇಕಿದ್ದ ಮಳೆಗಳು ಕೈ ಕೊಟ್ಟಿದ್ದರಿಂದ ಜಾನುವಾರು ಮೇವಿಗೂ ತತ್ವಾರ ಉಂಟಾಗಿದೆ. ಮೇವಿನ ಬೇಡಿಕೆ ಹೆಚ್ಚಾದಂತೆ ಹುಲ್ಲಿನ ಬೆಲೆಯೂ ಏರುತ್ತಿದ್ದೆ,ಇದರಿಂದ ಎಷ್ಟೋ ರೈತರು ಜಾನುವಾರುಗಳನ್ನು ಮಾರುತ್ತಿದ್ದಾರೆ. ಬಿಸಿಲಿನ ತಾಪ ತಡೆಯಲಾಗದೆ ಅಡಿಕೆ ತೋಟಗಳಿಗೆ ಟ್ಯಾಂಕರ್‌ಗಳಿಂದ ನೀರು ಹರಿಸಲಾಗುತ್ತಿದೆ, ಎಷ್ಟೋ ತೋಟಗಳು ಈಗಾಗಲೆ ನಾಶವಾಗಿವೆ.

ಬರಗಾಲದಿಂದ ಜಮೀನುಗಳಲ್ಲಿ ನೀರಿನ ಅಭಾವವುಂಟಾಗಿದೆ. ರೈತರು ಕೊಳವೆಬಾವಿ ಕೊರೆಯಿಸಲು ಮುಂದಾಗಿದ್ದು, 800 ಅಡಿಗಳಷ್ಟು ಕೊರೆಸಿದರೂ ಸಹಾ ನೀರು ಬರುತ್ತಿಲ್ಲ, ಕೊಳವೆ ಬಾವಿ ಕೊರೆಯುವವರು ಮನಸೋ ಇಚ್ಛೆ ದರ ನಿಗದಿ ಮಾಡುತ್ತಿರುವುದು ತಾಲೂಕಿನ ರೈತರಿಗೆ ನುಂಗಲಾರದ ತುತ್ತಾಗಿದೆ.

ತಾಲೂಕಿನಲ್ಲಿಸಾಕಷ್ಟುಕಡೆಗಳಲ್ಲಿಬೆಳೆಗಳು ಹಾನಿಯಾಗುತ್ತಿದ್ದರೂ ಸಹಾ ಇಲ್ಲಿನ ತೋಟಗಾರಿಕಾ ಇಲಾಖೆಯ ಅಧಿಕಾರಿಗಳು ಮಾತ್ರ ಯಾವುದಕ್ಕೂ ತಲೆ ಕೆಡಿಸಿಕೊಳ್ಳದೆ ಮೌನಕ್ಕೆ ಜಾರಿ ಜಾಣ ಕುರುಡರಾಗಿದ್ದಾರೆ. ಮಳೆ ಬರುವವರೆಗೂ ಸಹಾ ನಮಗೇನು ಕೆಲಸ ಎಂದು ಕಛೇರಿಯಲ್ಲೂ ಸರಿಯಾಗಿ ಇರದೆ ಯಾವ ಜಮೀನುಗಳಿಗೂ ಸಹಾ ಬೇಟಿ ನೀಡಿ ರೈತರ ಕಷ್ಟಗಳನ್ನ ಅರಿಯದೆ ಯಾವ ಜಮೀನುಗಳಿಗೂ ಸಹಾ ಹೋಗಿ ನೋಡದೆ ಇರುವುದು ವಿಪರ್ಯಾಸದ ಸಂಗತಿಯಾಗಿದ್ದು ಇಲ್ಲಿನ ತೋಟಗಾರಿಕಾ ಇಲಾಖೆಯ ಅಧಿಕಾರಿ ನಾವು ಯಾವಾಗ ಹೋದರೂ ಸಹಾ ಅವರು ಕಛೇರಿಯ ಸಮಯದಲ್ಲಿ ಇರವುದೇ ಇಲ್ಲಾ ಅವರನ್ನ ಕಾದು ಕಾದು ಬೇಟಿ ಮಾಡಿ ಮಾತನಾಡಿಸಿ ಸಲಹೆಗಳನ್ನ ಕೇಳಿದರೆ ತೋಟಕ್ಕೆ ಬಂದು ನೋಡಿ ಎಂದು ಮನವಿ ಮಾಡಿಕೊಂಡರೂ ಸಹಾ ಉಡಾಫೆಯ ಉತ್ತರಗಳನ್ನ ಹೇಳಿ ಕಳುಹಿಸುತ್ತಾರೆ ಎಂದು ತಾಲೂಕಿನ ಬಹುತೇಕ ರೈತರ ದೂರಾಗಿದೆ.

## ಫಾಸ್ಟ್ ನ್ಯೂಸ್

### ಸಾಲ ತೀರಿಸಲಾಗದೆ ಒಂದೇ ವಾರದಲ್ಲಿ ಇಬ್ಬರು ರೈತರು ಆತ್ಮಹತ್ಯೆ

» ಚಳ್ಳಕೆರೆ





ಸದಾಕಾಲ ರೈತರ ಪರವಾಗಿ ನಾವಿದ್ದೇವೆ ಎಂಬ ಸುಳ್ಳು ಭರವಸೆಯೊಂದಿಗೆ ಆಡಳಿತ ನಡೆಸುವ ಸರ್ಕಾರಗಳ ದಿವ್ಯ ನಿರ್ಲಕ್ಷ್ಯಕ್ಕೆ ಕ್ಷೇತ್ರದ ರೈತರು ನಿರಂತರ ಬಲಿಯಾಗುತ್ತಿದ್ದು, ರೈತರು ಬೆಳೆ ಬೆಳೆಯಲು ತಾವು ಮಾಡಿದ ಸಾಲವನ್ನು ತೀರಿಸಲಾಗದಂತ ದುಸ್ಥಿತಿಯಲ್ಲಿದ್ದು, ಪರಸ್ಥಿತಿ ಅವರನ್ನು ಸುಲಭವಾಗಿ ಸಾವಿನತ್ತ ಎಳೆದೊಯ್ಯುತ್ತಿದೆ. ಕೇವಲ ಮೂರು ದಿನಗಳ ಅವಧಿಯಲ್ಲಿ ಇಬ್ಬರು ಯುವ ರೈತರು ತಾವು ಜಮೀನಿಗಾಗಿ ಮಾಡಿದ ಸಾಲವನ್ನು ತೀರಿಸಲಾಗದೆ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದು,ರೈತರಬದುಕು ಗಾಳಿಗೋಪುರವೆಂಬುವುದು ರುಜುವಾತಾಗಿದೆ. ರೈತ ಸಾವಿನ ಬಗ್ಗೆ ವಿವಿಧ ರೈತ ಸಂಘಟನೆಗಳು ಸಹ ಮೌನಕ್ಕೆ ಶರಣಾಗಿರುವುದನ್ನು ಕಂಡರೆ ರೈತ ಸಂಘಟನೆಗಳು ಸಹ ರೈತರ ನೆರವಿಗೆ ದಾವಿಸುವಲ್ಲಿ ಹಿಂದೇಟು ಹಾಕುತ್ತಿದ್ದಾರೆಂಬ ಅನುಮಾನ ಕಾಡತೊಡಗಿದೆ. ತಾಲ್ಲೂಕಿನ ಕರೀಕೆರೆ ಗ್ರಾಮದ ರೈತ ಬಾಬುರೆಡ್ಡಿ(44) ತನ್ನ ತಂದೆಗೆ ಒಬ್ಬನೇ ಮಗನಾಗಿದ್ದು, ಹೆಂಡತಿ ಮಕ್ಕಳೊಂದಿಗೆ ಗ್ರಾಮದಲ್ಲಿ ವಾಸಿಸುತ್ತಿದ್ದ, ತನ್ನ ಜಮೀನಿನಲ್ಲಿದ್ದ ಶೇಂಗಾ, ಮೆಕ್ಕೆಜೋಳ, ತೊಗರಿ ಹಾಕಿದ್ದು, 6.09 ಗುಂಟೆ ಜಮೀನಿನಲ್ಲಿ ನೀರು ಕೈಕೊಟ್ಟ ಹಿನ್ನೆಲೆಯಲ್ಲಿ ಸುಮಾರು 5 ಲಕ್ಷಕ್ಕೂ ಹೆಚ್ಚು ಸಾಲವನ್ನು ಬೆಳೆಗಳ ಸಂರಕ್ಷಣೆಗಾಗಿ ಮಾಡಿದ್ದ. ನಿರಂತರ ಬೆಳೆ ಕೈಕೊಟ್ಟ ಹಿನ್ನೆಲೆಯಲ್ಲಿ ಚಿಂತೆಗೀಡಾದ ಈತ ಮಾನಸಿಕವಾಗಿ ಕುಗ್ಗಿ ಕೀಟನಾಶಕದ ಪುಡಿ ಸೇವಿಸಿದ್ದಾನೆ. ತಂದೆ ಹನುಮಂತರೆಡ್ಡಿ, ಈತನ ಹೆಂಡತಿ ಶ್ವೇತಾ, ಸಂಬಂಧಿ ಭೀಮಾರೆಡ್ಡಿ ಈತನನ್ನು ಜೀವನವಾಗಿ ಉಳಿಸಿಕೊಳ್ಳಲು ಚಳ್ಳಕೆರೆ, ಚಿತ್ರದುರ್ಗ, ದಾವಣಗೆರೆ ಆಸ್ಪತ್ರೆಗೆ ಓಡಾಡಿದರೂ ಏ.28ರಂದು ಈತ ದಾವಣಗೆರೆ ಹೋಗುವ ಮಾರ್ಗಮಧ್ಯದಲ್ಲಿ ಮೃತಪಟ್ಟಿದ್ದ. ತಾಲ್ಲೂಕಿನ ಯಲಗಟ್ಟೆ ಗೊಲ್ಲರಹಟ್ಟಿಯ ಯುವ ರೈತ ಎಸ್.ಶ್ರೀಧರ(35) ಗ್ರಾಮದಲ್ಲಿ 3/11 ಎಕರೆ ಜಮೀನಲ್ಲಿ ಶೇಂಗಾ ಬೆಳೆ ಹಾಕಿದ್ದ. ಕಳೆದ ಎರಡ್ಮೂರು ವರ್ಷಗಳಿಂದ ಜಮೀನಿನಲ್ಲಿದ್ದ ಕೊಳವೆಬಾವಿಯಲ್ಲಿ ನೀರು ಕಡಿಮೆಯಾಗಿ ಬೆಳೆಗೆ ಸಾಕಾಗುತ್ತಿರಲಿಲ್ಲ. ಬೆಳೆಯನ್ನು ಉಳಿಸಿಕೊಳ್ಳಲು ಖಾಸಗಿಯಾಗಿ ನೀರು ಖರೀದಿಸಿ ಬೆಳೆ ರಕ್ಷಿಸಿಕೊಳ್ಳಲು ಮುಂದಾಗಿದ್ದ. ಈ ಮದ್ಯೆ ಬೆಳಗೆರೆಯ ಗ್ರಾಮೀಣ ಬ್ಯಾಂಕ್‌ನಲ್ಲಿ 1ಲಕ್ಷ ಸಾಲ ಪಡೆದಿದ್ದ, ಅದಲ್ಲದೆ ಕೈಗಡವಾಗಿ ಎರಡ್ಮೂರು ಲಕ್ಷ ಸಾಲ ಮಾಡಿ ಸಾಲವನ್ನು ತೀರಿಸುವ ಕುರಿತು ಚಿಂತಾಕ್ರಾಂತನಾಗಿದ್ದ ಮನನೊಂದ ಈತ ಪಕ್ಕದ ಜಮೀನಿನ ಹುಣಸೆ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾನೆ. ಕ್ಷೇತ್ರದಲ್ಲಿ ಕೇವಲ ಮೂರ್‍ನಾಲ್ಕು ದಿನಗಳ ಅವಧಿಯಲ್ಲಿ ಇಬ್ಬರು ರೈತರು ಸಾಲದ ಬಾಧೆಗೆ ಕಳವಳಗೊಂಡು ಬೆದರಿ, ಹೆದರಿ ಜೀವನದಲ್ಲಿ ಸಾಲವನ್ನು ತೀರಿಸಲು ಸಾಧ್ಯವಿಲ್ಲವೆಂಬ ಚಿಂತಗೆ ಒಳಗಾಗಿ ನೇಣುಹಾಕಿಕೊಂಡು ಪ್ರಾಣಬಿಟ್ಟಿದ್ದಾರೆ. ಇಬ್ಬರು ರೈತರ ಸಾವಿನಿಂದ ಅವರ ಇಡೀ ಕುಟುಂಬವೇ ಬೀದಿಗೆ ಬೀಳುವ ಸ್ಥಿತಿ ಉಂಟಾಗಿದೆ. ಸರ್ಕಾರ ರೈತರ ಸಾಲವನ್ನು ಮನ್ನಾ ಮಾಡುವಂತೆ ರೈತ ಸಂಘಟನೆಗಳು ಒತ್ತಾಯಿಸಿದರೂ ಸಹ ಅವು ನಿರೀಕ್ಷಿತ ಮಟ್ಟದಲ್ಲಿ ಯಶಸ್ಸು ಕಂಡಿಲ್ಲ.

## ಬಿಸಿಲಿಗೆ ಕಿಡ್ನಿ ಸ್ಟೋನ್ ಸಾಧ್ಯತೆ, ದೇಹಕ್ಕೆ ನೀರಿನಂಶ ಕಡಿಮೆಯಾಗದಂತೆ ಎಚ್ಚರವಹಿಸಿ



» ಮಹದೇವಪುರ ಶಿವಮೂರ್ತಿ

ಪರಶುರಾಂಪುರ: ಬಿಸಿಲಿನ ತಾಪ ಜತೆ ಬಿಸಿ ಗಾಳಿಗೆ ದೇಹದ ನೀರಿನಂಶದ ಕೊರತೆಯಿಂದಾಗಿ ಆರೋಗ್ಯ ಸಮಸ್ಯೆಗಳೂ ಕಾಡಲಾರಂಭದ ಜತೆಗೆ ಮೂತ್ರದಲ್ಲಿ ಸೋಂಕು ಹಾಗೂ ಕಿಡ್ನಿ ಸ್ಟೋನ್ ಸಮಸ್ಯೆಯಿಂದ ಬಳಲುವವರನ್ನ ಕಾಣಬಹುದಾಗಿದೆ.ಅನಾರೋಗ್ಯದ ಕೇಸ್‌ಗಳಲ್ಲಿ ಅತೀ ಹೆಚ್ಚು ಮೂತ್ರದಲ್ಲಿ ಸೋಂಕು ಹಾಗೂ ಕಿಡ್ನಿ ಸ್ಟೋನ್ ಪ್ರಕರಣಗಳಾಗಿವೆ. ಇಂತಹ ಸಮಸ್ಯೆಯಿಂದ ಬಳಲುತ್ತಿರುವ ರೋಗಿಗಳ ಪ್ರಮಾಣ ಈ ಬಾರಿಯ ಬಿಸಿಲಿಗೆ ದುಪ್ಪಟ್ಟು ಆಗುತ್ತಿದೆ ಎಂದು ವೈದ್ಯರು ಹೇಳಿದ್ದಾರೆ.ತಾಪಮಾನ ಏರಿಕೆಯು ಜನರಲ್ಲಿ ಮೂತ್ರಪಿಂಡದಲ್ಲಿ ಕಲ್ಲುಗಳನ್ನು ಅಭಿವೃದ್ಧಿಪಡಿಸುವ ಸಾಧ್ಯತೆ ಹೆಚ್ಚಿಸಿದೆ.ಬೇಸಿಗೆಯಲ್ಲಿ ಕಿಡ್ನಿ ಸ್ಟೋನ್ ಉಂಟಾಗಲು ಪ್ರಮುಖ ಕಾರಣವೆಂದರೆ ದೇಹದಲ್ಲಿನ ನಿರ್ಜಲೀಕರಣ. ಮನುಷ್ಯನ ದೇಹಕ್ಕೆ ದಿನವೊಂದಕ್ಕೆ ಸುಮಾರು 2ರಿಂದ 3 ಲೀ. ನೀರು ಅಗತ್ಯ. ಬೇಸಿಗೆಯಲ್ಲಿ ಬೆವರು ಹೆಚ್ಚಾಗಿ ಹೋಗುವ ಜತೆಗೆ ದೇಹದಲ್ಲಿರುವ ನೀರಿನ ಅಂಶವನ್ನು ಕಸಿದುಕೊಳ್ಳುತ್ತದೆ. ಇದು ನೇರವಾಗಿ ಮೂತ್ರದ ಸೋಂಕು ಹಾಗೂ ಕಿಡ್ನಿ ಸ್ಟೋನ್‌ಗೆ ಕಾರಣವಾಗುತ್ತಿದೆ.

**ಮುಂಜಾಗ್ರತೆ ಕ್ರಮವೇನು? ಚಿಕಿತ್ಸೆ ಏನು?:** ಅತ್ಯಂತ ಸಾಮಾನ್ಯ ಚಿಕಿತ್ಸೆ ಎಂದರೆ, ಪ್ರತಿನಿತ್ಯ ನಾಲ್ಕರಿಂದ ಐದು ಲೀಟರ್ ನೀರು ಕುಡಿಯುವುದು. ಹೌದು, ನೀರು ಕುಡಿಯುವುದರಿಂದ ಕಿಡ್ನಿ ಸಂಪೂರ್ಣ ಶುದ್ಧವಾಗಲಿದೆ. ನೀರು ಅಥವಾ ಜ್ಯೂಸ್‌ಗಳನ್ನು ಸೇವಿಸಬಹುದು. ಇದು ಆರೋಗ್ಯಕ್ಕೂ ಹೆಚ್ಚು ಉಪಯುಕ್ತ. ಈಗಾಗಲೇ ಕಿಡ್ನಿ ಸ್ಟೋನ್ ಆಗಿದ್ದಲ್ಲಿ, ವೈದ್ಯರ ಬಳಿ ತೆರಳಿ, ಸ್ಕ್ಯಾನ್ ಮಾಡಿಸಿ, ಕಲ್ಲಿನ ಗಾತ್ರದ ಬಗ್ಗೆ ತಿಳಿದುಕೊಳ್ಳಿ. ಗಾತ್ರವನ್ನು ಆಧರಿಸಿ ವೈದ್ಯರು ಚಿಕಿತ್ಸೆ ನೀಡಲಿದ್ದಾರೆ. ಮತ್ತೊಮ್ಮೆ ಕಿಡ್ನಿ ಸ್ಟೋನ್ ಆಗದಂತೆ ಕಾಪಾಡಿಕೊಳ್ಳಲು, ಈ ಮೊದಲು ಕಿಡ್ನಿ ಸ್ಟೋನ್ ಆಗಲು ಕಾರಣವೇನೆಂಬುದನ್ನು ತಿಳಿದುಕೊಂಡು ಮತ್ತೊಮ್ಮೆ ಆ ತಪ್ಪು ಆಗದಂತೆ ಆರೋಗ್ಯದ ಮೇಲೆ ಎಚ್ಚರಿಕೆ ವಹಿಸುವುದು ಒಳಿತು.

## ಫಾಸ್ಟ್ ನ್ಯೂಸ್

### ಕುಡಿವ ನೀರಿನ ಸಮಸ್ಯೆ ಇದ್ದರೆ, ಸಹಾಯವಾಣಿಗೆ ಕರೆ ಮಾಡಿ

» ಹೊಸದುರ್ಗ



2023– 24 ನೇ ಸಾಲಿನಲ್ಲಿ ಹೊಸದುರ್ಗ ತಾಲೂಕನ್ನು ತೀವ್ರ ಬರಪೀಡಿತ ತಾಲೂಕು ಎಂದು ಘೋಷಣೆ ಮಾಡಿರುವ ಹಿನ್ನೆಲೆಯಲ್ಲಿ ಬರನಿರ್ವಹಣೆ ಅಂಗವಾಗಿ ಜನಜಾನುವಾರುಗಳಿಗೆ ಕುಡಿಯುವ ನೀರನ್ನು ಒದಗಿಸುವ ಸಂಬಂಧ ತಾಲೂಕು ಕಚೇರಿಯ ಸಹಾಯವಾಣಿ ದೂರವಾಣಿ ಸಂಖ್ಯೆ: 08199 295058 ಸಾರ್ವಜನಿಕರು ಕರೆ ಮಾಡಿ ಮಾಹಿತಿ ನೀಡಬಹುದು ಎಂದು ಶುಕ್ರವಾರ ತಹಶೀಲ್ದಾರ್ ತಿರುಪತಿ ಪಾಟೀಲ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಬಸವ ಜಯಂತಿ ಅಂಗವಾಗಿ ಜಿಲ್ಲಾ ಮಟ್ಟದ ಮಕ್ಕಳ ಕವಿಗೋಷ್ಠಿ

» ಚಿತ್ರದುರ್ಗ

ಋಷಿಸಂಸ್ಕೃತಿ ಗುರುಕುಲ ಮಹಾಸಂಸ್ಥಾನ ಮತ್ತು ಕರ್ನಾಟಕ ರಾಜ್ಯ ಶಿಕ್ಷಣ ಪರಿಷತ್ತು ವತಿಯಿಂದ "ಬಸವ ಜಯಂತಿ ಅಂಗವಾಗಿ ಮನೆಯಂಗಳದಲ್ಲಿ ಮಕ್ಕಳ ಹಬ್ಬ" ಹೆಸರಿನಲ್ಲಿ " ಜಿಲ್ಲಾ ಮಟ್ಟದ ಮಕ್ಕಳ ಕವಿಗೋಷ್ಠಿ " ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ಶಿಕ್ಷಣ ಪರಿಷತ್ತು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೀತಾ ಭರಮಸಾಗರ ತಿಳಿಸಿದ್ದಾರೆ.



ಐದನೇ ತರಗತಿ ಯಿಂದ ದ್ವಿತೀಯ ಪಿಯುಸಿ ವರೆಗಿನ ಮಕ್ಕಳು ಕವಿಗೋಷ್ಠಿಯಲ್ಲಿ ಭಾಗವಹಿಸಬಹುದು. (ಹಸಿರು ಕರ್ನಾಟಕ, ಅರಣ್ಯ ಅಭಿವೃದ್ಧಿ, ಪರಿಸರ ಪ್ರಾಣಿ ಪಕ್ಷಿ, ಜೀವವೈವಿಧ್ಯ ಅಳಿವು ಉಳಿವು, ಪ್ಲಾಸ್ಟಿಕ್ ನಿಷೇಧ, ಸಾಂಸ್ಕೃತಿಕ ನಾಯಕ, ವಿಶ್ವಗುರು ಬಸವಣ್ಣ ಈ ವಿಷಯಗಳ ಕುರಿತು ಕವಿತೆ ಬರೆಯಬಹುದು)ಮಕ್ಕಳಲ್ಲಿ ಅಡಗಿರುವ ಸುಪ್ತ ಪ್ರತಿಭೆಯನ್ನು ಹೊರಹಾಕುವುದು. ಮೊಬೈಲ್ ಗೀಳಿನಿಂದ ಮಕ್ಕಳು ಹೊರಬಂದು ಬರಹದ ಕಡೆ ಗಮನಕೊಡುವುದನ್ನು ಕಲಿಸುವುದು, ವಿದ್ಯಾರ್ಥಿಗಳು ಸಾಹಿತ್ಯಿಕ ಸಾಂಸ್ಕೃತಿಕ ವೇದಿಕೆಗಳಲ್ಲಿ ಮಾತನಾಡುವುದನ್ನು ಕಲಿಸುವುದು, ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸುವುದು ನಮ್ಮ ಉದ್ದೇಶ. ಈ ಹಿನ್ನೆಲೆಯಲ್ಲಿ ಹೊಸ ಕವಿಗಳನ್ನು ಹುಡುಕುವ ಜೊತೆಗೆ ಪ್ರೋತ್ಸಾಹ ಮಾಡುವ ಹಿನ್ನೆಲೆಯಲ್ಲಿ ಜಿಲ್ಲಾ ಮಟ್ಟದ ಮಕ್ಕಳ ಕವಿಗೋಷ್ಠಿ ಹಮ್ಮಿಕೊಳ್ಳಲಾಗಿದೆ ಎಂದು ಗೀತಾ ಭರಮಸಾಗರ ಅವರು ತಿಳಿಸಿದ್ದಾರೆ.ಇದೇ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳಿಗೆ ಸನ್ಮಾನ ಮಾಡಲಾಗುತ್ತದೆ. ವಿದ್ಯಾರ್ಥಿಗಳು ಕಡ್ಡಾಯವಾಗಿ ತಮ್ಮ ಆಧಾರ್ ಕಾರ್ಡ್, ಭಾವಚಿತ್ರ ದೊಂದಿಗೆ ಫೋನ್ ನಂಬರ್ ಹಾಕಿ ಅಂಚೆ ಅಥವಾ ಕೋರಿಯರ್ ಮೂಲಕ ಈ ಕೆಳಗಿನ ವಿಳಾಸಕ್ಕೆ ಕವಿತೆಗಳನ್ನು ಕೈ ಬರಹದಲ್ಲಿ ಬರೆದು ಕಡ್ಡಾಯವಾಗಿ ಕಳುಹಿಸಬೇಕು. ಜೊತೆಗೆ Gmail: rushigurukula@gmail.com, ಈ ವಿಳಾಸಕ್ಕೆ ಟೈಪ್ ಮಾಡಿ ಮೇಲ್ ಕಳಿಸಿ ಎಂದು ತಿಳಿಸಿದ್ದಾರೆ. ಉತ್ತಮ ಮತ್ತು ಸುಂದರ ಕೈ ಬರಹಕ್ಕೆ ಸೂಕ್ತ ಬಹುಮಾನ ವಿರುತ್ತದೆ. ಕವಿತೆಗಳನ್ನು ಕಳುಹಿಸುವ ವಿಳಾಸ **ಆಡಳಿತಾಧಿಕಾರಿಗಳು** : ಋಷಿಸಂಸ್ಕೃತಿ ಗುರುಕುಲ ಮಹಾಸಂಸ್ಥಾನ (ರಿ). ನಂ 315/ಬಿ. ಒಂದನೇ ಅಡ್ಡ ರಸ್ತೆ, ಹತ್ತನೇ ಮುಖ್ಯ ರಸ್ತೆ. ಐಯುಡಿಪಿ ಬಡಾವಣೆ. ಚಿತ್ರದುರ್ಗ. 577501 ಹೆಚ್ಚಿನ ಮಾಹಿತಿಗಾಗಿ: 8073744244. 9113694200 ಸಂಪರ್ಕಿಸಲು ಕೋರಲಾಗಿದೆ.

### ಮದ್ಯ ಮರಾಟ ನಿಷೇಧ

» ದಾವಣಗೆರೆ

ಲೋಕಸಭಾ ಚುನಾವಣೆಯು ಮೇ 7 ರಂದು ನಡೆಯಲಿದ್ದು ಮತದಾನ ಮುಕ್ತಾಯವಾಗುವ 48 ಗಂಟೆ ಮೊದಲು ಮೇ 5 ರಂದು ಸಂಜೆ 6 ಗಂಟೆಯಿಂದ ಮೇ 7 ರ ಸಂಜೆ 7 ಗಂಟೆಯವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧಿಸಿ ಜಿಲ್ಲಾ ದಂಡಾಧಿಕಾರಿ ಡಾ; ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ.

### ದಾವಣಗೆರೆಗೆ 4ಕ್ಕೆ ಪ್ರಿಯಾಂಕಗಾಂಧಿ, ಸಿಎಂ, ಡಿಸಿಎಂ

» ದಾವಣಗೆರೆ

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಡಾ.ಪ್ರಭಾ ಮಲ್ಲಿಕಾರ್ಜುನ್ ಪರ ಮತಯಾಚನೆಗೆ ಕಾಂಗ್ರೆಸ್ ಪಕ್ಷದ ನಾಯಕಿ ಪ್ರಿಯಾಂಕಗಾಂಧಿ ಆಗಮಿಸುತ್ತಿದ್ದು, ನಗರದ ಸರ್ಕಾರಿ ಬಾಲಕರ ಪ್ರೌಢಶಾಲ ಮೈದಾನದಲ್ಲಿ ಏಪ್ರಿಲ್ 4ರ ಮಧ್ಯಾಹ್ನ 3.45ಕ್ಕೆ ಜನತೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ ಎಂದು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಡಿ.ಬಸವರಾಜ್ ಮಾಹಿತಿ ನೀಡಿದರು. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಕಾಂಗ್ರೆಸ್ ನಾಯಕಿ ಪ್ರಿಯಾಂಕ ಗಾಂಧಿ ಆಗಮನದಿಂದ ಹೊಸ ಸಂಚಲನ ಸೃಷ್ಠಿಯಾಗಲಿದೆ. ಈಗಾಗಲೇ ಪ್ರಿಯಾಂಕ ಗಾಂಧಿ ದೇಶದ ಉದ್ದಗಲಕ್ಕೂ ಕಾಂಗ್ರೆಸ್ ಅಭ್ಯರ್ಥಿಗಳ ಪ್ರಚಾರ ಕೈಗೊಂಡಿದ್ದಾರೆ.

ವಿಶ್ವ ಮಲೇರಿಯಾ ದಿನದ ಅಂಗವಾಗಿ ಜಾಗೃತಿ ಜಾಥಾದಲ್ಲಿ ಡಿಹೆಚ್‌ಓ ಡಾ.ಜಿ.ಪಿ.ರೇಣುಪ್ರಸಾದ್

# ಮಲೇರಿಯಾ ನಿವಾರಣೆ ಎಲ್ಲರ ಸಹಭಾಗಿತ್ವದಿಂದ ಸಾಧ್ಯ

» ಚಿತ್ರದುರ್ಗ

ಕರ್ನಾಟಕದಲ್ಲಿ 2025ಕ್ಕೆ ಮಲೇರಿಯಾ ನಿವಾರಣಾ ಗುರಿ ಹೊಂದಲಾಗಿದೆ. ಶೀಘ್ರ ಪತ್ತೆ ಸಂಪೂರ್ಣ ಚಿಕಿತ್ಸೆಯಾದ ಸಾವು–ನೋವುಗಳನ್ನು ತಡೆಗಟ್ಟಬಹುದು. ಮಲೇರಿಯಾ ನಿವಾರಣೆ ಎಲ್ಲರ ಸಹಭಾಗಿತ್ವದಿಂದಷ್ಟೇ ಸಾಧ್ಯ. ಎಲ್ಲರೂ ಸೇರಿ ಮಲೇರಿಯಾ ರೋಗವನ್ನು ನಿವಾರಿಸೋಣ ಎಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಜಿ.ಪಿ.ರೇಣುಪ್ರಸಾದ್ ಹೇಳಿದರು.

ನಗರದ ರಂಗಯ್ಯನಬಾಗಿಲು ಸಮೀಪದ ಎಸ್.ಜೆ.ಪ್ಯಾರಾಮೆಡಿಕಲ್ ಕಾಲೇಜ್ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಷ್ಟ್ರೀಯ ಆರೋಗ್ಯ ಅಭಿಯಾನ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ರೋಗವಾಹಕ ಅಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಚೇರಿ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಲಾಗಿದ್ದ ವಿಶ್ವ ಮಲೇರಿಯಾ ದಿನದ ಅಂಗವಾಗಿ ಜಾಗೃತಿ ಜಾಥಾ ಕಾರ್ಯಕ್ರಮಕ್ಕೆ ಹಸಿರು ನಿಶಾನೆ ತೋರುವ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.




ವಿಶ್ವ ಮಲೇರಿಯಾ ದಿನದ ಈ ಬಾರಿಯ ಘೋಷವಾಕ್ಯ "ಹೆಚ್ಚು ಸಮಾನತೆಯ ಜಗತ್ತಿಗೆ ಮಲೇರಿಯಾ ವಿರುದ್ಧ ಹೋರಾಟವನ್ನು ತೀವ್ರಗೊಳಿಸೋಣ" ಎಂಬುದಾಗಿದೆ. ಜಿಲ್ಲೆಯಲ್ಲಿ ಕಳೆದ ಎರಡು ವರ್ಷಗಳಿಂದ ಮಲೇರಿಯಾ ನಿಯಂತ್ರಣದಲ್ಲಿದ್ದು, ಯಾವುದೇ ಪ್ರಕರಣ ಕಂಡುಬಂದಿಲ್ಲ. ಆದಾಗ್ಯೂ ಕೂಡ ಮಲೇರಿಯಾ ಕುರಿತು ಹೆಚ್ಚಿನ ಅರಿವು ಅತ್ಯಗತ್ಯ. ಮಲೇರಿಯಾ ರೋಗವು ತುಂಬಾ ಆತಂಕಕಾರಿಯಾದದ್ದು, ಈ ರೋಗವು ಮಕ್ಕಳು ಹಾಗೂ ಗರ್ಭಿಣಿಯರ ಮೇಲೆ ಹೆಚ್ಚು ಪರಿಣಾಮ ಬೀರುತ್ತದೆ. ಅಂತವರು ಯಾವುದೇ ಜ್ವರ ಬರಲಿ ಹತ್ತಿರದ ಸರ್ಕಾರಿ ಆಸ್ಪತ್ರೆ ಅಥವಾ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ತಕ್ಷಣ ಚಿಕಿತ್ಸೆ ಪಡೆಯಬೇಕು ಎಂದರು. ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಉದ್ದೇಶದಿಂದ ಮಲೇರಿಯಾ ಜಾಥಾ ಹಮ್ಮಿಕೊಂಡಿದ್ದು, ಜಾಥಾವು ನಗರದ ಎಸ್.ಜೆ ಪ್ಯಾರಾ ಮೆಡಿಕಲ್ ಕಾಲೇಜ್ ಆವರಣದಿಂದ ಆರಂಭಗೊಂಡು ಮಲೇರಿಯಾ ನಿರ್ಮೂಲನೆ ನಮ್ಮೆಲ್ಲರ ಜವಾಬ್ದಾರಿ, ಸೊಳ್ಳೆ ಪರದೆ ಬಳಸಿ, ಮಲೇರಿಯಾ ಓಡಿಸಿ, ಜನರ ಅಮೂಲ್ಯ ಜೀವನ ಉಳಿಸಿವುದು ನಮ್ಮ ನಿಮ್ಮೆಲ್ಲರ ಜವಾಬ್ದಾರಿ ಎಂಬ ವಿವಿಧ ಘೋಷಣೆಗಳೊಂದಿಗೆ ಉಚ್ಚಂಗಿಯಲ್ಲಮ್ಮ, ಈಶ್ವರ ದೇವಸ್ಥಾನ ಮಾರ್ಗವಾಗಿ ಕರುವಿನ ಕಟ್ಟೆ ವೃತ್ತದಿಂದ ಪುನಃ ಕಾಲೇಜು ಆವರಣದಲ್ಲಿ ಸಮಾಪ್ತಿಗೊಂಡಿತು.

ಈ ಸಂದರ್ಭದಲ್ಲಿ ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಕಾಶೀ, ಜಿಲ್ಲಾ ಸರ್ವೇಕ್ಷಣಾಧಿಕಾರಿ ಚಂದ್ರಶೇಖರ್ ಕಂಬಾಳಿಮಠ್, ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬಿ.ವಿ.ಗಿರೀಶ್, ಕೀಟಶಾಸ್ತ್ರಜ್ಞೆ ಡಾ.ನಂದಿನಿ ಕಡಿ, ಎಸ್.ಜೆ. ಪ್ಯಾರಮೆಡಿಕಲ್ ಕಾಲೇಜು ಅಧ್ಯಕ್ಷ ಡಾ.ಶಿವಲಿಂಗಯ್ಯ, ಪ್ರಾಂಶುಪಾಲ ಚಂದ್ರಶೇಖರ್, ನಗರ ಆರೋಗ್ಯಾ ಕೇಂದ್ರದ ವೈದ್ಯಾಧಿಕಾರಿಗಳು, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಿ.ಮೂಗಪ್ಪ, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಜಿಲ್ಲಾ ಆರೋಗ್ಯ ಮೇಲ್ವಿಚಾರಣಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಇದ್ದರು.

ದಾಖಲೆ ಸಹಿತ ಬಸವರಾಜು ವಿ.ಶಿವಗಂಗಾ ತಿರುಗೇಟು

# ದಾವಣಗೆರೆ ಸಂಸದ ಸಿದ್ದೇಶ್ವರ ಸುಳ್ಳಿನ ಸರದಾರ

» ಚನ್ನಗಿರಿ

ಸಾಸ್ವೇಹಳ್ಳಿ ಯೋಜನೆ ತಂದಿದ್ದು ನಾನು ಹಾಗೂ ಮಾಡಾಳು ವಿರೂಪಾಕ್ಷಪ್ಪ ಎಂದು ಹೇಳಿಕೆ ಸಂತೇಬೆನ್ನೂರಲ್ಲಿ ಹೇಳಿಕೆ ನೀಡಿರುವ ಸಂಸದ ಜಿ.ಎಂ ಸಿದ್ದೇಶ್ವರ ಅವರ ವಿರುದ್ಧ ಶಾಸಕ ಬಸವರಾಜು ವಿ.ಶಿವಗಂಗಾ ತಿರುಗೇಟು ನೀಡಿದ್ದಾರೆ.

ಸಿದ್ದೇಶ್ವರ್ ಅವರು ಸುಳ್ಳಿನ ಸರದಾರ ಇಂಥ ಸುಳ್ಳುಗಳನ್ನ ಹೇಳಿಯೇ ನಾಲ್ಕು ಬಾರಿ ಗೆದ್ದಿರುವುದು. ಬಿಜೆಪಿ ಪಕ್ಷ ಎಂದರೆ ಅದು ಸುಳ್ಳಿನ ಪಕ್ಷವಾಗಿದ್ದು, ಜನರಿಗೆ ಸುಳ್ಳು ಹೇಳಿ ಇದುವರೆಗೂ ಅಧಿಕಾರಕ್ಕೆ ಬಂದಿದ್ದಾರೆ. ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆ ಜಾರಿ ಬಗ್ಗೆ ಬಹಿರಂಗವಾಗಿ ಚರ್ಚೆಗೆ ಬರಲಿ, ದಾಖಲೆ ಸಹಿತ ನಾನು ಚರ್ಚೆ ಮಾಡುತ್ತೇನೆ ಎಂದು ಜಿ.ಎಂ.ಸಿದ್ದೇಶ್ವರ ಅವರಿಗೆ ಸವಾಲು ಹಾಕಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೂ ಸಾಸ್ವೇಹಳ್ಳಿ ಏತ ನೀರಾವರಿ ಯೋಜನೆಗೂ ಕಾಂಗ್ರೆಸ್ ಗೂ ಸಂಬಂಧವೇ ಇಲ್ಲ ಎಂದಿದ್ದಾರೆ. 2015–16 ನೇ ಸಾಲಿನಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್ ಪಕ್ಷ ಅಂದಿನ ಮುಖ್ಯಮಂತ್ರಿಗಳಾಗಿದ್ದ ಸಿದ್ದರಾಮಯ್ಯ ಅವರು ಆಯವ್ಯಯ ಭಾಷಣದಲ್ಲಿ ಸಂತೇಬೆನ್ನೂರು ಮತ್ತು ಕಸಬಾ ಹೋಬಳಿಗಳಲ್ಲಿ 2 ಹಂತದಲ್ಲಿ ಏತ ನೀರಾವರಿ ಯೋಜನೆ ಕೈಗೊಳ್ಳುವ ಬಗ್ಗೆ ಘೋಷಣೆ ಮಾಡಿದ್ದರು. ಅದರಂತೆ ನೀರಾವರಿ ಇಲಾಖೆ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ನಂತರ ವರದಿ ಅನುಸಾರ ದಾವಣಗೆರೆ, ಚಿತ್ರದುರ್ಗ ಮತ್ತು ಶಿವಮೊಗ್ಗ ಜಿಲ್ಲೆಗಳ ( ಚನ್ನಗಿರಿ ಕಸಬಾ ಹೋಬಳಿ 46 ಕೆರೆಗಳು) ಒಟ್ಟು 121 ಕೆರೆಗಳಿಗೆ ನೀರೊದಗಿಸಲು ಯೋಜನೆ ಉದ್ದೇಶವಾಗಿತ್ತು ಎಂದರು.




ನಂತರ 23/06/2016 ರಂದು ನೀರಾವರಿ ಇಲಾಖೆಯಿಂದ ಈ ಯೋಜನಾ ವರದಿಯನ್ನ 15 ನೇ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ಮಂಡಿಸಲಾಗಿತ್ತು ಎಂದು ಶಾಸಕರಾದ ಬಸವರಾಜು ವಿ ಶಿವಗಂಗಾ ಮಾಹಿತಿ ನೀಡಿದರು.

ನಂತರ 19/08/2016 ರಲ್ಲಿ ರೂ. 415.68 ಕೋಟಿಗಳ ಯೋಜನೆ ಅನುಮೋದನೆಗೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ. ಅಂದು ಅಧಿಕಾರದಲ್ಲಿದ್ದ ಕಾಂಗ್ರೆಸ್ ಸರ್ಕಾರ ದಿನಾಂಕ:11/01/2017 ರಂದು ಸಾಸ್ವೇಹಳ್ಳಿ ಏತ ನೀರಾವರಿ ಯೋಜನಾ ವರದಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿತ್ತು ಈ ಯೋಜನೆ ಜಾರಿಗೆ ಬರಲು ಮಾಜಿ ಶಾಸಕ ವಡ್ನಾಳ್ ರಾಜಣ್ಣ ಸೇರಿದಂತೆ ಕಾಂಗ್ರೆಸ್ ಮುಖಂಡರ ಶ್ರಮ, ಹೋರಾಟ ಕೂಡ ಇದೆ ಎಂದು ತಿಳಿಸಿದ್ದಾರೆ.

ಬಿಜೆಪಿ ಪಕ್ಷದವರಿಗೆ ಚುನಾವಣೆ ವೇಳೆ ಸುಳ್ಳುಗಳನ್ನು ಸೃಷ್ಟಿ ಮಾಡುತ್ತಾರೆ ಎಂಬುದಕ್ಕೆ ಸಂಸದರು ಹೇಳಿದ ಸುಳ್ಳೇ ಸಾಕ್ಷಿ ಎಂದರು. ಬಿಜೆಪಿ ಎಂದರೆ ಸುಳ್ಳು ಎಂದೇ ಪ್ರಖ್ಯಾತಿ, ಇಂಥ ಸುಳ್ಳುಗಳನ್ನ ಜನರು ನಂಬುವುದಿಲ್ಲ, ಬಿಜೆಪಿಯವರು ಒಂದಾದರೂ ಸತ್ಯ ಹೇಳಿ ಮತ ಕೇಳಲಿ ಸುಳ್ಳು ಮಾಹಿತಿ ನೀಡಿ ಜನರನ್ನು ದಾರಿ ತಪ್ಪಿಸಬಾರದು ಎಂದಿದ್ದಾರೆ. ಸೋಲಿನ ಭಯದಿಂದ ಇಂಥ ಸುಳ್ಳುಗಳನ್ನ ಸಿದ್ದೇಶ್ವರ ಅವರು ಹೇಳುತ್ತಿದ್ದಾರೆ. ದಾವಣಗೆರೆ ಸೇರಿದಂತೆ ರಾಜ್ಯದಲ್ಲಿ ಕಾಂಗ್ರೆಸ್ ಅಲೆ ದಿನ ದಿನಕ್ಕೂ ಹೆಚ್ಚಾಗುತ್ತಿದ್ದು, ಬಿಜೆಪಿಗೆ ನಡುಕ ಉಂಟಾಗಿದ್ದು, ಸುಳ್ಳು ಹೇಳುತಿದ್ದಾರೆ, ಈ ಬಾರಿ ಕಾಂಗ್ರೆಸ್ ಗೆಲುವನ್ನು ಇಂಥ ಸುಳ್ಳು ಹೇಳಿ ತಪ್ಪಿಸಲು ಸಾಧ್ಯವಿಲ್ಲ ಎಂದರು.

# ಪರಶುರಾಮಪುರ: ಆಕಸ್ಮಿಕ ಬೆಂಕಿಗೆ ತೋಟದಲ್ಲಿದ್ದ ಅಡಿಕೆ, ತೆಂಗು, ಮಾವಿನ ಮರ ಭಸ್ಮ



» ಚಳ್ಳಕೆರೆ

ತಾಲ್ಲೂಕಿನ ಪರಶುರಾಮಪುರ ಗ್ರಾಮದ ಪಾವಗಡ ರಸ್ತೆಯಲ್ಲಿರುವ ಕೊಂಡ್ಲೇರ ಪರಮೇಶ್ವರಪ್ಪರವರ ತೋಟಕ್ಕೆ ಶುಕ್ರವಾರ ಮಧ್ಯಾಹ್ನ ಆಕಸ್ಮಿಕ ಬೆಂಕಿ ಬಿದ್ದ ಪರಿಣಾಮ ತೋಟದಲ್ಲಿದ್ದ ಅಡಿಕೆ, ತೆಂಗು, ಮಾವಿನ ಮರಗಳು ಬೆಂಕಿ ಆಹುತಿಯಾಗಿವೆ. ತೋಟದಲ್ಲಿದ್ದ 14 ಹುಣಸೆಮರ, 8 ಮಾವಿನಮರ, ಎರಡು ತೆಂಗುಮರ, ಎರಡು ನಿಂಬೆಹಣ್ಣಿನ ಗಿಡ ಬೆಂಕಿ ಆಹುತಿಯಾಗಿ ಎರಡು ಲಕ್ಷ ನಷ್ಟ ಸಂಭವಿಸಿದೆ. ಅಗ್ನಿಶಾಮಕ ಅಧಿಕಾರಿ ಬಿ.ಜಯಣ್ಣ ಮತ್ತು ಸಿಬ್ಬಂದಿ ಕೂಡಲೇ ಸ್ಥಳಕ್ಕೆ ದಾವಿಸಿ ಬೆಂಕಿ ನಿಯಂತ್ರಿಸುವಲ್ಲಿ ಸಫಲರಾಗಿದ್ದಾರೆ.

# ನಗರಂಗೆರೆ : ತೋಟದಲ್ಲಿದ್ದ ಅಡಿಕೆ, ತೆಂಗು, ಹುಣಸೆಮರ ಬೆಂಕಿಗೆ ಆಹುತಿ


» ಚಳ್ಳಕೆರೆ

ಕಳೆದ ಸುಮಾರು ಒಂದು ತಿಂಗಳಿನಿಂದ ಚಳ್ಳಕೆರೆ ತಾಲ್ಲೂಕಿನಾದ್ಯಂತ ಉರಿಬಿಸಿಲು ಬೆಂಕಿಯಂತೆ ಸುಡುತ್ತಿದೆ. ಪ್ರತಿನಿತ್ಯ ಸುಮಾರು 38ರಿಂದ41 ಡಿಗ್ರಿ ತಾಪಮಾನದಿಂದ ಜನ, ಜಾನುವಾರುಗಳು ಹೈರಾಣವಾಗಿವೆ. ತಾಲ್ಲೂಕಿನಾಂದ್ಯತ ಎಲ್ಲಿ ನೋಡಿದರೂ ರಣ ಬಿಸಲಿಗೆ ಜನ ರಸ್ತೆ ಬರುವುದೇ ಕಡಿಮೆಯಾಗಿದೆ.

ಇಂತಹ ಬಿಸಿಲಿನ ಝುಳಕ್ಕೆ ಜನತೆ ಈಗಾಗಲೇ ರೋಸಿದ್ದು, ತಾಲ್ಲೂಕಿನ ನಗರಂಗೆರೆ ಗ್ರಾಮದ ರಿ.ಸರ್ವೆ ನಂ. 132ರ ತೋಟಕ್ಕೆ ಮಧ್ಯಾಹ್ನ ಸುಮಾರು 2ರ ಸಮಯದಲ್ಲಿ ಆಕಸ್ಮಿಕವಾಗಿ ಬೆಂಕಿ ಬಿದ್ದು ತೋಟದಲ್ಲಿದ್ದ ತೆಂಗು, ಅಡಿಕೆ, ಹುಣಸೆಮರಗಳು ಬೆಂಕಿಗೆ ಆಹುತಿಯಾಗಿ ಸುಮಾರು 1.50 ಲಕ್ಷ ನಷ್ಟ ಉಂಟಾಗಿದೆ.



ಗ್ರಾಮದ ರುದ್ರಮ್ಮ, ಎಸ್.ಎಂ.ತಿಪ್ಪೇಸ್ವಾಮಿ, ಸೋಮಶೇಖರ್, ಶಿವಪ್ರಕಾಶ್, ರಾಜೇಶ್‌ರವರಿಗೆ ಸೇರಿದ ಜಮೀನಾಗಿದ್ದು, ಬೆಂಕಿ ಬಿದ್ದ ಕೂಡಲೇ ಗ್ರಾಮದ ಜನರು ದಾವಿಸಿ ಬಂದು ಬೆಂಕಿ ಹೆಚ್ಚು ಹರಡದಂತೆ ನೀರು ಹಾಕಿಬೆಂಕಿ ನಂದಿಸಲು ಪ್ರಯತ್ನಿಸಿದ್ದಾರೆ. ಸುದ್ದಿ ತಿಳಿದ ಅಗ್ನಿಶಾಮಕ ಪಡೆ ಗ್ರಾಮಕ್ಕೆ ತೆರಳಿ ಬೆಂಕಿ ನಂದಿಸಿದೆ. ಪೊಲೀಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.



ಜಾನಪದ ಜಾಗೃತಿ ಪರಿಷತ್‌ನಿಂದ ಡಾ.ಮಲ್ಲಿಕಾರ್ಜುನ್ ಸಿ.ಟಿ. ರವರಿಗೆ ಸನ್ಮಾನ.


## ಪ್ರಮುಖ ಸುದ್ದಿ

# ಸರ್ವಜಾತಿ ಜನಾಂಗಕ್ಕೆ ರಾಜಕೀಯ ಪ್ರಾತಿನಿಧ್ಯತೆ ನೀಡಿ ಮುಂಚೂಣಿಗೆ ತಂದ ನಾಯಕ ಡಿ.ದೇವರಾಜ್ ಅರಸ್

» ದಾವಣಗೆರೆ

ರಾಜ್ಯದ ಅಹಿಂದವರ್ಗದ ಬಾಳನ್ನು ಬೆಳಗಿಸಿ ಅಹಿಂದ ವರ್ಗದ ರಾಜಕೀಯ ಶಕ್ತಿಯನ್ನು ವೃದ್ಧಿಸಿದ ರಾಜ್ಯದ ಅತ್ಯುತ್ತಮ ಪ್ರಜಾನಾಯಕ ಡಿ.ದೇವರಾಜ್ ಅರಸು ರವರು.

ಎಪ್ಪತ್ತರ ದಶಕದಲ್ಲಿ ಅಹಿಂದ ವರ್ಗದಲ್ಲಿ ಬಹುಪಾಲು ಅವಿದ್ಯಾವಂತರ ಸಂಖ್ಯೆನೇ ಹೆಚ್ಚು.ಈಗಿನ ಹಾಗೆ ಪ್ರಚಾರಸಾಮಗ್ರಿಗಳ ಅರ್ಭಟವಿಲ್ಲದೆ ಕೇವಲ ಬೆರಳೆಣಿಕೆಯಷ್ಟು ದಿನಪತ್ರಿಕೆಗಳು ಕೆಲವೇ ಕೆಲವು ಓದುಗರನ್ನು ತಲುಪುತಿದ್ದವು. ಇನ್ನು ದೃಶ್ಯ ಮಾಧ್ಯಮಗಳ ಕನಸೂ ಕಾಣದ ಸಂದರ್ಭ. ಅಲ್ಲೊಂದು ಇಲ್ಲೊಂದು ಉಳ್ಳವರ ಮನೆಯಲ್ಲಿ ಆಕಾಶವಾಣಿ ರೇಡಿಯೋ ಬಿಟ್ಟರೆ ಬೇರೆನೂ ಇರಲಿಲ್ಲಾ ಅಂಥ ಸಂದರ್ಭದಲ್ಲಿ ಎಲ್ಲಾ ತಳ ಸಮುದಾಯದ ಜಾತಿ,ಧರ್ಮ ಜನಾಂಗಗಳನ್ನು ಗುರುತಿಸಿ ಒಂದು ಗೂಡಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲಾ. ಈಗ ಐದು ನಿಮಿಷದಲ್ಲಿ ಲಕ್ಷಾಂತರ ಜನರಿಗೆ ವಿಷಯ ಮುಟ್ಟಿಸುವ ಸುಲಭ ಸಂಪರ್ಕ ಸಾಧನಗಳಿವೆ.ಆದರೆ ಅಂದಿನ ಸಮಯದಲ್ಲಿ ಅಂಚೆಯ ಕಾರ್ಡ ಮುಖಾಂತರ ಅಥವಾ ಖುದ್ದಾಗಿಹೋಗಿ ವಿಷಯ ತಲುಪಿಸಬೇಕಾಗಿತ್ತು. ಅಂಥ ಕಠಿಣ ಸಮಯದಲ್ಲಿ ದೇವರಾಜ ಅರಸರವರು ಅಹಿಂದ ವರ್ಗದ ತಳ ಸಮುದಾಯಗಳನ್ನು ಹುಡುಕಿ ಅದರಲ್ಲಿ ಜನ ಸೇವಾ ಮನೋಭಾವದ ವ್ಯಕ್ತಿಗಳನ್ನು ಹೆಕ್ಕಿತಗೆದು ಅಂಥವರಿಗೆ ಜಾತಿನೆಲೆಗಟ್ಟು ಇಲ್ಲದಕಡೆಗಳಲ್ಲಿಯೂ ಕೂಡಾ ಬಹುಜನಾಂಗ ವಿದ್ದ ಕ್ಷೇತ್ರಗಳಲ್ಲೂ ಕಡಿಮೆ ಜನಾಂಗದ ಇರುವ ವ್ಯಕ್ತಿಗಳನ್ನು ಚುನಾವಣೆಗೆ ನಿಲ್ಲಿಸಿ ವಿಧಾನ ಸಭೆಗೆ,ಲೋಕಸಭೆಗೆ ಆಯ್ಕೆಮಾಡಿಕಳಿಸಿದ್ದಾರೆ.ಇದಕ್ಕೆ ಒಂದು ನಿದರ್ಶನ ಸಾಕು ಅನಿಸುತ್ತದೆ.1971ರ ಲೋಕಸಭೆಯ ಚುನಾವಣೆ ಸಂದರ್ಭ ನೆನಪಿಸಿಕೊಳ್ಳಬಹುದು.(ಕನಕಪುರ ಲೋಕಸಭೆ)ಈಗ ಬೆಂಗಳೂರು ಗ್ರಾಮಾಂತರ ದಲ್ಲಿ ಅಲ್ಪಸಂಖ್ಯಾತ ಸಮುದಾಯದ ಮತಗಳ ಪ್ರಾಬಲ್ಯವಿಲ್ಲದೆ ಬಹುಸಂಖ್ಯಾತ ಮೇಲ್ವರ್ಗದ ಮತಗಳಿರುವ ಕ್ಷೇತ್ರದಲ್ಲಿ ಸ್ಥಳಿಕರೂಅಲ್ಲದಮುಸ್ಲಿಮ್‌ಸಮುದಾಯದ ಸಿ.ಕೆ.ಜಾಫರ್ ಷರೀಫರಿಗೆ ಟಿಕೇಟು ಕೊಡಿಸಿ ಲೋಕಸಭೆಗೆ ಆಯ್ಕೆಮಾಡಿ ಕಳಿಸಿದ ಡಿ.ದೇವರಾಜ ಅರಸರು ಅಹಿಂದ ವರ್ಗದ ಮೇರುಪರ್ವತವೆಂದೇ ಹೇಳಬೇಕಾಗುತ್ತದೆ. ದೇವರಾಜ ಅರಸು ರವರು ಎಲ್ಲ ತಳ ಸಮುದಾಯದ ಬಹುತೇಕರಿಗೆ ರಾಜಕೀಯ ಸ್ಥಾನಮಾನ ನೀಡಿ ರಾಜ್ಯದ ಜನ ಮಾನಸದಲ್ಲಿ ಕಾಂಗ್ರೆಸ್ ಪಕ್ಷದ ಅಚ್ಚೊತ್ತಿದ್ದರು. ಆದರೆ ಅಂಥ ಬಲಿಷ್ಟಗೊಳಿಸಿದ ಕಾಂಗ್ರೆಸ್ ಪಕ್ಷದಲ್ಲಿ ಗೆದ್ದಲಿನಲ್ಲಿ ನುಸುಳುಕೋರರಂತೆ ಸೇರಿಕೊಂಡ ಜಾತಿವಾದಿಗಳು,ಧನದಾಹಿಗಳು,ಸ್ವಾರ್ಥಿಗಳು ,ಸಮಯಸಾಧಕರು ಕಾಂಗ್ರೆಸ್ ಪಕ್ಷವನ್ನು ತಮ್ಮ ಕಪಿಮುಷ್ಠಿಯಲ್ಲಿ ಇಟ್ಟುಕೊಂಡು



ಪಿತ್ರಾರ್ಜಿತ ಆಸ್ತಿಯನ್ನಾಗಿಸಿಕೊಂಡು ಪಾಳೆಗಾರಿಕೆಯ ರೀತಿ ಸಾಮ್ರಾಜ್ಯ ಸ್ಥಾಪಿಸುವ ನಿಟ್ಟಿನಲ್ಲಿ ಅಜ್ಜ,ಅಪ್ಪ,ವ ್ಗ,ಮೊಮ್ಮಗ,ಸೊಸೆ,ಮಗಳು,ಮರಿಮೊವ ್ಮಗ,ಸಾಲದ್ದಕ್ಕೆ ತಮ್ಮ ಆಶೋತ್ತರಗಳನ್ನು ಈಡೇರಿಸಿ ಸಂತೃಪ್ತಪಡಿಸಿದವರಿಗೆ ಹೀಗೆ ತಮ್ಮೊಳಗೇ ಅಧಿಕಾರದ ಕೋಟೆಯನ್ನು ಕಟ್ಟಿಕೊಂಡು ಪರರಿಗೆ ಅವಕಾಶಕೊಡದೇ ಸರ್ವಾಧಿಕಾರಿಗಳಂತೆ ಇರುವವರಿಗೆ ಸಮಾಜ ತಲೆಬಾಗಬೇಕೆ?

ವಂಶ ಪಾರಂಪರಿಕವಾಗಿ ಅಪ್ಪ,ಮಗ,ಪತ್ನಿ,ಸೊಸೆ,ಮಗಳು,ಅಳಿಯ,ರಕ್ತಸಂಭಂದಿ, ಎಲ್ಲರೂ ನೀವೇ ಅಧಿಕಾರಕ್ಕೆ ಹಪಹಪಿಸಿ ಸುಶಿಕ್ಷಿತರು,ವಿದ್ಯಾವಂತರು,ಪ್ರಗತಿಪರ ಚಿಂತಕರು,ಜನಪರಹೋರಾಟಗಾರರನ್ನ ಅಪರಾಧಿಗಳಂತೆ ಬಿಂಬಿಸುತ್ತಿರುವ ಸ್ವಾರ್ಥಸಾಧಕರಿಗೆ ಪ್ರಜಾನಾಯಕರೆಂದು ಯಾವಬಾಯಿಯಿಂದ ಕರೆಯಬೇಕು?

ಯಾವುದೇ ಒಂದು ಸಾರ್ವಜನಿಕ ಸಂಘ,ಸಂಸ್ಥೆ, ಪಕ್ಷ ಸಂಘಟನಾತ್ಮಕವಾಗಿ ಬೆಳೆಯಬೇಕಾದರೆ ಎಲ್ಲಾಜಾತಿ,ಧರ್ಮ, ತಳಸಮುದಾಯದವರನ್ನು ಗುರುತಿಸಿ ಅಧಿಕಾರ ಹಂಚಿದರೆ ಅದು ಸಮೃದ್ಧ ಮತ್ತು ಸಧೃಡವಾಗಿರುತ್ತದೆ.ಹಿಂದೆ ದೇವರಾಜ್ ಅರಸು ರವರಲ್ಲಿ ಅಂಥಾ ಒಂದು ಅಗಾಧ ಶಕ್ತಿ ಇತ್ತು ಹಾಗಾಗಿ ಆ ಸಂರ್ಭದಲ್ಲಿ ಕಾಂಗ್ರೆಸ್ ಪಕ್ಷಕೂಡಾ ಸಧೃಡ ವಾಗಿತ್ತು. ತದನಂತರ ರಾಮಕೃಷ್ಣ ಹೆಗಡೆಯವರೂ ಅದನ್ನೇ ಅನುಸರಿಸಿದರು ಹಾಗಾಗಿ ಆಗ ಜನತಾ ಪರಿವಾರವೂ ಸದೃಢ ಮತ್ತು ಬಲಿಷ್ಠ ವಾಗಿತ್ತು.ದೇವರಾ ಅರಸು ಮತ್ತು ರಾಮಕೃಷ್ಣ ಹೆಗಡೆಯವರಂಥ ಜನನಾಯಕರು ಪ್ರಸ್ತುತ ಸನ್ನಿವೇಶದಲ್ಲಿ ನೆನಪಿಸಿಕೊಳ್ಳುವುದೂ ಕಷ್ಟ. ಅಂಥಾ ಇತರರನ್ನು ಬೆಳೆಸುವ ಮನೋಭಾವದ ಒಬ್ಬನೇ ಒಬ್ಬ ರಾಜಕಾರಣಿ ಇವತ್ತು ನಮ್ಮ ಮುಂದೆ ಇಲ್ಲಾ.

ಸ್ವಾರ್ಥ ಸಾಧನೆಗಾಗಿ,ಸ್ವಜಾತಿಯಹೆಸರು ದುರ್ಬಳಕೆಮಾಡಿಕೊಂಡು ಕುಟುಂಬದ ಶ್ರೇಯೋಭಿವೃದ್ಧಿಗಾಗಿ ಸದಾ ಹಪಹಪಿಸುವ ಡೋಂಗಿ ಸಮಾಜಸೇವಕರನ್ನು ಜನನಾಯಕ ಎನ್ನಲಾದೀತೆ?ಹಣ ಹಂಚಿ ಬಹುಪಾಗ ಹೇಳಿಸಿಕೊಂಡು,ಡೋಣೆಷನ್ ಕೊಟ್ಟುಬಿರುದುಪಡೆದುಜಾಹೀರಾತುಗಳಲ್ಲಿ ರಾರಾಜಿಸಿ ಪರಿಚಯಿಸಿಕೊಳ್ಳುವವನು ಪ್ರಜಾನಾಯಕನೆ?

## ಫಾಸ್ಟ್ ನ್ಯೂಸ್

### 6ನೇ ತರಗತಿಗೆ ದಾಖಲಾತಿಗೆ ಪ್ರವೇಶ ಪರೀಕ್ಷೆ

» ದಾವಣಗೆರೆ

ಅಲ್ಪಸಂಖ್ಯಾತರ ಮೊರಾರ್ಜಿ ದೇಸಾಯಿ ವಸತಿ ಶಾಲೆ, ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳು ಹಾಗೂ ಡಾ.ಎ.ಪಿ.ಜೆ. ಅಬ್ದುಲ್ ಕಲಾಂ ವಸತಿ ಶಾಲೆಗಳಿಗೆ 2024-25ನೇ ಸಾಲಿನ 6ನೇ ತರಗತಿ ಪ್ರವೇಶಕ್ಕಾಗಿ ಪ್ರವೇಶ ಪರೀಕ್ಷೆಯನ್ನು ಮೇ.19 ರಂದು ನಡೆಸಲಾಗುವುದು. ವಿದ್ಯಾರ್ಥಿಗಳ ಪ್ರವೇಶ ಪತ್ರ (ಊಂಐಐ ಖಿಉಅಏಇಖಿ) ವನ್ನು ಜಿಲ್ಲಾ ಅಧಿಕಾರಿಗಳ ಕಚೇರಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ಕೊಠಡಿ ಸಂಖ್ಯೆ 44, ಜಿಲ್ಲಾಡಳಿತ ಭವನ, ಪಿ.ಬಿ ರಸ್ತೆ, ಕರೂರು ಕ್ರಾಸ್, ದಾವಣಗೆರೆ ಇಲ್ಲಿ ವಿತರಿಸಲಾಗುತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ಶಾಲೆಯ 6ನೇ ತರಗತಿ ಪ್ರವೇಶಕ್ಕಾಗಿ ಸೇವಾಸಿಂಧು ಪೋರ್ಟಲ್‌ನಲ್ಲಿ ಅರ್ಜಿ ಸಲ್ಲಿಸಿರುವ ಎಲ್ಲಾ ವಿದ್ಯಾರ್ಥಿಗಳು ಪ್ರವೇಶ ಪತ್ರ (ಊಂಐಐ ಖಿಉಅಏಇಖಿ) ವನ್ನು ಪಡೆದುಕೊಳ್ಳುವಂತೆ ತಿಳಿಸಿದೆ. ಹಾಗೂ ಪ್ರವೇಶ ಪತ್ರ ಪಡೆಯಲು ಬರುವ ವಿದ್ಯಾರ್ಥಿ, ಪೋಷಕರು ವಿದ್ಯಾರ್ಥಿಯ ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರ, ಆಧಾರಕಾರ್ಡ್, ಅರ್ಜಿ ಸಲ್ಲಿಸಿರುವ ಪ್ರತಿಯನ್ನು ಕಡ್ಡಾಯವಾಗಿ ತರಬೇಕು. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 08192-250022 ಸಂಪರ್ಕಿಸಬಹುದೆಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಅಧಿಕಾರಿ ಮಲ್ಲಿಕಾರ್ಜುನ್ ಮಠದ್ ತಿಳಿಸಿದ್ದಾರೆ.

### ಹೈಸ್ಕೂಲ್ ಮೈದಾನದಲ್ಲಿ ಚುನಾವಣಾ ರ್‍ಯಾಲಿ, ಮೇ 4 ರಂದು ಕೆ.ಎಸ್.ಆರ್‌ಟಿಸಿ ಬಸ್ ನಿಲ್ದಾಣ ಹೊಸ ಕಟ್ಟಡಕ್ಕೆ ಸ್ಥಳಾಂತರ

» ದಾವಣಗೆರೆ.

ದಾವಣಗೆರೆ ಹೈಸ್ಕೂಲ್ ಮೈದಾನದಲ್ಲಿ ಮೇ 4 ರಂದು ಚುನಾವಣಾ ರ್‍ಯಾಲಿಯಲ್ಲಿ ಎಐಸಿಸಿ, ಕಾರ್ಯದರ್ಶಿಯವರಾದ ಪ್ರಿಯಾಂಕ ಗಾಂಧಿ ವಾದ್ರ,ಮತ್ತು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆಗಮಿಸುತ್ತಿರುವಹಿನ್ನಲೆಯಲ್ಲಿಭದ್ರತಾದೃಷ್ಟಿಯಿಂದ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಲು ಹೈಸ್ಕೂಲ್ ಮೈದಾನದಲ್ಲಿದ್ದ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣವನ್ನು ತಾತ್ಕಾಲಿಕವಾಗಿ ಒಂದು ದಿನ ಮಾತ್ರ ಹೊಸ ಬಸ್ ನಿಲ್ದಾಣದಿಂದ ಕಾರ್ಯಾಚರಣೆ ಮಾಡಲಾಗುತ್ತದೆ ಎಂದು ವಿಭಾಗೀಯ ನಿಯಂತ್ರಕರಾದ ಶ್ರೀನಿವಾಸ್‌ಮೂರ್ತಿ ಸಿ.ಇ.ತಿಳಿಸಿದ್ದಾರೆ.

### ಮತದಾನ ದಿನ ಕರ್ತವ್ಯ ನಿರತ ಮತದಾರರಿಗೆ ಅಂಚೆ ಮತದಾನಕ್ಕೆ ಮೇ 4, 5, 6 ರಂದು ಅವಕಾಶ

» ದಾವಣಗೆರೆ

ಲೋಕಸಭಾ ಚುನಾವಣೆ ನಡೆಯುತ್ತಿದ್ದು ಮೇ 7 ರಂದು ಮತದಾನ ದಿನದಂದು ಕರ್ತವ್ಯ ನಿರತ ಮತದಾರರಿಗೆ ಮೇ 4 ರಿಂದ 6 ರ ವರೆಗೆ ಸ್ಮಾರ್ಟ್ ಸಿಟಿ ಬಿಲ್ಡಿಂಗ್‌ನಲ್ಲಿ ಸ್ಥಾಪಿಸಲಾಗಿರುವ ಅಂಚೆ ಮತ ಸೌಲಭ್ಯ ಕೇಂದ್ರದಲ್ಲಿ ಮತದಾನ ಮಾಡಲು ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಚುನಾವಣಾಧಿಕಾರಿ ಡಾ; ವೆಂಕಟೇಶ್ ಎಂ.ವಿ ತಿಳಿಸಿದ್ದಾರೆ. ಮತದಾನ ದಿನ ಕರ್ತವ್ಯದಲ್ಲಿ ತೊಡಗಿದ್ದು ಅಂಚೆ ಮತದಾನಕ್ಕಾಗಿ ಘೋಷಣಾ ಪತ್ರ ನೀಡಿದ ಅಧಿಕಾರಿ, ಸಿಬ್ಬಂದಿಯವರು ಆಯೋಗ ನಿಗದಿ ಮಾಡಿದ 19 ದಾಖಲೆಗಳಲ್ಲಿ ಒಂದನ್ನು ಹಾಜರುಪಡಿಸಿ ಬೆಳಗ್ಗೆ 9 ರಿಂದ ಸಂಜೆ 5 ಗಂಟೆಯೊಳಗಾಗಿ ಅಂಚೆ ಮತದಾನ ಮಾಡಬಹುದಾಗಿದೆ.

### ಲೋಕಸಭಾ ಚುನಾವಣೆ, ಜಿಲ್ಲೆಯಾದ್ಯಂತ 144 ಸೆಕ್ಷನ್ ಜಾರಿ

ದಾವಣಗೆರೆ,ಮೇ.03(ಕರ್ನಾಟಕ ವಾರ್ತೆ) ಲೋಕಸಭಾ ಚುನಾವಣೆ ಮತದಾನವು ಮೇ 7 ರಂದು ನಡೆಯಲಿದ್ದು ಮುಕ್ತ, ನ್ಯಾಯ ಸಮ್ಮತ, ಪಾರದರ್ಶಕ, ಸಾರ್ವಜನಿಕ ಶಾಂತಿ ಹಾಗೂ ಕಾನೂನು ಸುವ್ಯವಸ್ಥೆ ಕಾಪಾಡಲು ಮೇ 5 ರ ಸಂಜೆ 6 ಗಂಟೆಯಿಂದ ಮೇ 7 ರಂದು ಮತದಾನ ಮುಕ್ತಾಯವಾಗುವವರೆಗೂ ಜಿಲ್ಲೆಯಾದ್ಯಂತ 144 ಸೆಕ್ಷನ್ ಅನ್ವಯ ಎಲ್ಲಾ ಮತಗಟ್ಟೆಗಳ 200 ಮೀಟರ್ ವ್ಯಾಪ್ತಿಯಲ್ಲಿ ನಿಷೇಧಾಜ್ಞೆ ಜಾರಿಗೊಳಿಸಿ ಜಿಲ್ಲಾ ದಂಡಾಧಿಕಾರಿ ಡಾ; ವೆಂಕಟೇಶ್ ಎಂ.ವಿ ಆದೇಶಿಸಿದ್ದಾರೆ. ಮತದಾರರನ್ನು ಹೊರತುಪಡಿಸಿ 5 ಜನರಿಗಿಂತ ಹೆಚ್ಚು ಗುಂಪು ಸೇರುವಂತಿಲ್ಲ, ಯಾವುದೇ ರಾಜಕೀಯ, ಧಾರ್ಮಿಕ ಮೆರವಣಿಗೆ ಮಾಡುವಂತಿಲ್ಲ, ಶಸ್ತ್ರಾಸ್ತ್ರಗಳು, ಮಾರಕಾಸ್ತ್ರ, ದೊಣ್ಣೆ, ಕಲ್ಲು, ಚಾಕು, ಇಟ್ಟಿಗೆ, ಕೋಲು ಸೇರಿದಂತೆ ದೈಹಿಕ ಹಿಂಸೆ ಮಾಡಬಲ್ಲ ಯಾವುದೇ ಆಯುಧಗಳನ್ನು ತೆಗೆದುಕೊಂಡು ಓಡಾಡುವಂತಿಲ್ಲ. ಪ್ರಚೋದನಾಕಾರಿ ಭಾಷಣ, ಸಭೆ, ಸಮಾರಂಭ ಮಾಡುವುದು ನಿಷಿದ್ಧ. ಮತಗಟ್ಟೆಯೊಳಗೆ ಮೊಬೈಲ್ ಫೋನ್, ಕಾರ್ಡ್‌ಲೆಸ್ ಫೋನ್ ಸೇರಿದಂತೆ ಇನ್ನಿತರೆ ಎಲೆಕ್ಟ್ರಾನಿಕ್ ವಸ್ತುಗಳನ್ನು ತೆಗೆದುಕೊಂಡು ಹೋಗುವಂತಿಲ್ಲ. ಕ್ಷೇತ್ರದಲ್ಲದವರು ಕ್ಷೇತ್ರದಿಂದ ಹೊರ ಹೋಗಿರಬೇಕು ಎಂದು ಆದೇಶದಲ್ಲಿ ತಿಳಿಸಿದ್ದಾರೆ.

# ದ್ವೈವಾರ್ಷಿಕ ವಿಧಾನ ಪರಿಷತ್ ಚುನಾವಣೆ, ದಾವಣಗೆರೆ ಜಿಲ್ಲೆಯಲ್ಲಿ 2 ಶಿಕ್ಷಕರ ಕ್ಷೇತ್ರ, ಒಂದು ಪದವೀಧರ ಕ್ಷೇತ್ರ

## ಮತದಾರರ ನೊಂದಣಿಗೆ ಮೇ 6 ಕೊನೆ ದಿನ; ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಡಾ; ವೆಂಕಟೇಶ್ ಎಂ.ವಿ

» ದಾವಣಗೆರೆ




ಚುನಾವಣಾ ಆಯೋಗವು ವಿಧಾನ ಪರಿಷತ್ತಿನ ದ್ವೈವಾರ್ಷಿಕ ಚುನಾವಣಾ ವೇಳಾಪಟ್ಟಿ ಪ್ರಕಟಿಸಿದ್ದು ದಾವಣಗೆರೆ ಜಿಲ್ಲೆಯ ವ್ಯಾಪ್ತಿ ಹೊಂದಿರುವ ಆಗ್ನೇಯ ಶಿಕ್ಷಕರ ಕ್ಷೇತ್ರ ಹಾಗೂ ನೈರುತ್ಯ ಶಿಕ್ಷಕರ ಹಾಗೂ ಪದವೀಧರರ ಕ್ಷೇತ್ರಕ್ಕೆ ಮೇ 9 ರಿಂದ ನಾಮಪತ್ರ ಸಲ್ಲಿಕೆ ಆರಂಭವಾಗಲಿದ್ದು ಮತದಾರರ ನೊಂದಣಿಗೆ ಮೇ 6 ಕೊನೆಯ ದಿನವಾಗಿದೆ ಎಂದು ಜಿಲ್ಲಾಧಿಕಾರಿ ಹಾಗೂ ಸಹಾಯಕ ಚುನಾವಣಾಧಿಕಾರಿ ಡಾ; ವೆಂಕಟೇಶ್ ಎಂ.ವಿ ತಿಳಿಸಿದರು.

ಅವರು ಶುಕ್ರವಾದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ರಾಜಕೀಯ ಪಕ್ಷಗಳ ಮುಖಂಡರೊಂದಿಗೆ ವಿಧಾನ ಪರಿಷತ್ ಚುನಾವಣೆ ಕುರಿತು ಮಾಹಿತಿ ನೀಡುವ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ದಾವಣಗೆರೆ ಜಿಲ್ಲೆಯಲ್ಲಿ ಮೂರು ವಿಧಾನಸಭಾ ಸದಸ್ಯ ಸ್ಥಾನಗಳಿಗೆ ಚುನಾವಣೆ ನಡೆಯಲಿದೆ. ಆಯನೂರು ಮಂಜುನಾಥ್ ಅವರು ನೈರುತ್ಯ ಪದವೀಧರರ ಕ್ಷೇತ್ರದ ಸದಸ್ಯರಾಗಿದ್ದು ಏಪ್ರಿಲ್ 19 ರಂದು ರಾಜೀನಾಮೆ ನೀಡಿದ್ದರು. ಎಸ್.ಎಲ್.ಭೋಜೆಗೌಡ ನೈರುತ್ಯ ಶಿಕ್ಷಕರ ಕ್ಷೇತ್ರ ಮತ್ತು ಆಗ್ನೇಯ ಶಿಕ್ಷಕರ ಕ್ಷೇತ್ರದಿಂದ ವೈ.ಎ.ನಾರಾಯಣಸ್ವಾಮಿಯವರು ಸದಸ್ಯರಾಗಿದ್ದು ಇವರ ಅವಧಿ ಜೂನ್ 21 ಕ್ಕೆ ಮುಕ್ತಾಯಗೊಳ್ಳುವುದರಿಂದ ಈ ಮೂರು ಕ್ಷೇತ್ರಗಳಿಗೆ ಚುನಾವಣೆ ನಡೆಯಲಿದೆ.

ಮೇ 9 ರಂದು ಅಧಿಸೂಚನೆ ಪ್ರಕಟವಾಗಲಿದ್ದು ಮೇ 16 ರ ವರೆಗೆ ನಾಮಪತ್ರಗಳನ್ನು ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಮೇ 17 ರಂದು ನಾಮಪತ್ರಗಳ ಪರಿಶೀಲನೆ, ಮೇ 20 ರಂದು ನಾಮಪತ್ರಗಳ ವಾಪಸ್ ಪಡೆಯಲು ಕೊನೆಯ ದಿನವಾಗಿರುತ್ತದೆ. ಜೂನ್ 3 ರಂದು ಬೆಳಗ್ಗೆ 8 ರಿಂದ ಸಂಜೆ 4 ಗಂಟೆಯವರೆಗೆ ಮತದಾನ ನಡೆಯಲಿದೆ. ಮತ ಎಣಿಕೆಯು ಜೂನ್ 6 ರಂದು ನಡೆಯಲಿದ್ದು ಜೂನ್ 12 ರವರೆಗೆ ನೀತಿ ಸಂಹಿತೆ ಜಾರಿಯಲ್ಲಿರುತ್ತದೆ. ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಬೆಂಗಳೂರು ಪ್ರಾದೇಶಿಕ ಆಯುಕ್ತರು ಚುನಾವಣಾಧಿಕಾರಿಗಳಾಗಿರುವರು ಮತ್ತು ನೈರುತ್ಯ ಶಿಕ್ಷಕರ, ಪದವೀಧರ ಕ್ಷೇತ್ರಕ್ಕೆ ಮೈಸೂರು ಪ್ರಾದೇಶಿಕ ಆಯುಕ್ತರು ಚುನಾವಣಾಧಿಕಾರಿಗಳಾಗಿದ್ದು ಜಿಲ್ಲಾಧಿಕಾರಿ ಸಹಾಯಕ ಚುನಾವಣಾಧಿಕಾರಿಯಾಗಿರುವರು. 2023 ರ ಡಿಸೆಂಬರ್ ಅಂತ್ಯಕ್ಕೆ ಮತದಾರರ ವಿವರ; ಕರ್ನಾಟಕ ಆಗ್ನೇಯ ಶಿಕ್ಷಕರ ಕ್ಷೇತ್ರಕ್ಕೆ ಜಿಲ್ಲೆಯ ದಾವಣಗೆರೆ, ಹರಿಹರ, ಜಗಳೂರು ತಾಲ್ಲೂಕುಗಳು ಸೇರಲಿದ್ದು ಗಂಡು 2564, ಮಹಿಳೆ 1384 ಸೇರಿ 3948 ಮತದಾರರಿದ್ದಾರೆ. ನೈರುತ್ಯ ಶಿಕ್ಷಕರ ಕ್ಷೇತ್ರಕ್ಕೆ ಜಿಲ್ಲೆಯ ನ್ಯಾಮತಿ, ಹೊನ್ನಾಳಿ, ಚನ್ನಗಿರಿ ತಾ; ಬಸವಪಟ್ಟಣ-1 ಮತ್ತು 2 ನೇ ಹೋಬಳಿ, ಸಂತೆಬೆನ್ನೂರು-1 ಮತ್ತು 2 ನೇ ಹೋಬಳಿ, ಚನ್ನಗಿರಿ ತಾ; ಕಸಬಾ, ಉಬ್ರಾಣಿ ಹೋಬಳಿ, ದೇವರಹಳ್ಳಿ ಸೇರಿ ಒಟ್ಟು ಗಂಡು 688, ಹೆಣ್ಣು 246 ಸೇರಿ ಒಟ್ಟು 934, ನೈರುತ್ಯ ಪದವೀಧರರ ಕ್ಷೇತ್ರಕ್ಕೆ ನ್ಯಾಮತಿ, ಹೊನ್ನಾಳಿ, ಚನ್ನಗಿರಿ ತಾ; ಬಸವಪ್ಟಣ-1 ಮತ್ತು 2 ಹೋಬಳಿ, ಸಂತೆಬೆನ್ನೂರು 1 ಮತ್ತು 2, ಚನ್ನಗಿರಿ ತಾ; ಕಸಬಾ, ಉಬ್ರಾಣಿ ಹೋಬಳಿ, ದೇವರಹಳ್ಳಿ ಗ್ರಾಮ ಒಳಗೊಂಡಂತೆ 3900 ಗಂಡು, 2096 ಹೆಣ್ಣು ಸೇರಿ 6296 ಮತದಾರರಿದ್ದಾರೆ.

**ಮತದಾರರ ನೊಂದಣಾಧಿಕಾರಿಗಳು;** ಆಯಾ ವಿಭಾಗದ ಉಪವಿಭಾಗಾಧಿಕಾರಿಗಳು, ತಹಶೀಲ್ದಾರರು ಸಹಾಯಕ ಮತದಾರರ ನೊಂದಣಾಧಿಕಾರಿಗಳಾಗಿದ್ದು ಕ್ಷೇತ್ರ ಶಿಕ್ಷಣಾಧಿಕಾರಿಗಳು ನಿಯೋಜಿತ ಅಧಿಕಾರಿಗಳಾಗಿರುತ್ತಾರೆ. ಮತದಾರರ ನೊಂದಣಿ ವೇಳೆ ಒಬ್ಬರಿಂದ ಗರಿಷ್ಠ 5 ಅರ್ಜಿಗಳನ್ನು ಮಾತ್ರ ಮತದಾರರ ನೊಂದಣಿಗೆ ಸ್ವೀಕರಿಸಲಾಗುತ್ತದೆ ಎಂದರು. ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಸೈಯ್ಯದಾ ಆಫ್ರೀನ್ ಭಾನು ಎಸ್.ಬಳ್ಳಾರಿ ಹಾಗೂ ವಿವಿಧ ರಾಜಕೀಯ ಪಕ್ಷಗಳ ಮುಖಂಡರು ಉಪಸ್ಥಿತರಿದ್ದರು.

# ರಾಜಬೀದಿಗಳಲ್ಲಿ ಏಕನಾಥೇಶ್ವರಿ ಮೆರವಣಿಗೆ



» ಚಿತ್ರದುರ್ಗ

ಏಕನಾಥೇಶ್ವರಿಅಮ್ಮನಮೆರವಣಿಗೆನಗರದರಾಜಬೀದಿಗಳಲ್ಲಿ ಶುಕ್ರವಾರ ವಿಜೃಂಭಣೆಯಿಂದ ನಡೆಯಿತು.

ಕೋಟೆ ರಸ್ತೆಯಲ್ಲಿರುವ ಪಾದಗುಡಿಯಿಂದ ಹೊರಟ ಏಕನಾಥೇಶ್ವರಿ ಆನೆಬಾಗಿಲು, ಬುರುಜಿನಹಟ್ಟಿ, ಹೊಳಲ್ಕೆರೆ ರಸ್ತೆ, ಎಸ್.ಬಿ.ಎಂ.ರಸ್ತೆ, ಧರ್ಮಶಾಲಾ ರಸ್ತೆ, ದೊಡ್ಡಪೇಟೆ, ಜೋಗಿಮಟ್ಟಿ ರಸ್ತೆ, ಕರುವಿನಕಟ್ಟೆ ವೃತ್ತದ ಮೂಲಕ ಸಾಗಿತು. ಮಲ್ಲಿಗೆ, ಕನಕಾಂಬರ, ಸುಗಂಧರಾಜ, ಗುಲಾಬಿ, ಸೇವಂತಿಗೆ, ದ್ರಾಕ್ಷಿ, ಬಾದಾಮಿ, ದೊಡ್ಡ ದೊಡ್ಡ ಗಾತ್ರದ ಹಾರಗಳಿಂದ ಅಲಂಕರಿಸಲಾಗಿದ್ದ ಏಕನಾಥೇಶ್ವರಿ ಎತ್ತಿನಗಾಡಿಯಲ್ಲಿ ವಿರಾಜಮಾನಳಾಗಿದ್ದ ಮೆರವಣಿಗೆಯನ್ನು ರಸ್ತೆಯ ಎರಡು ಬದಿಗಳಲ್ಲಿ ನಿಂತಿದ್ದ ಭಕ್ತರು ವೀಕ್ಷಿಸಿ ಸಂಭ್ರಮಿಸಿದರು.

ಅಲ್ಲಲ್ಲಿ ಮನೆಯ ಮುಂದೆ ಮಹಿಳೆಯರು ನೀರು ಹಾಕಿ ರಂಗೋಲಿ ಬಿಡಿಸಿ ಏಕನಾಥೇಶ್ವರಿ ಅಮ್ಮನಿಗೆ ಭಕ್ತಿ ಸಮರ್ಪಿಸಿದರು.ಡೊಳ್ಳು, ತಮಟೆ, ಉರುಮೆ ಸದ್ದಿಗೆ ಮೆರವಣಿಗೆಯಲ್ಲಿ ಸೇರಿದ್ದ ನೂರಾರು ಯುವಕರು ಕುಣಿದು ಕುಪ್ಪಳಿಸಿದರು.ಏಕನಾಥೇಶ್ವರಿ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಜಮೀನ್ದಾರ್ ದೊರೆಸ್ವಾಮಿ, ನಿರ್ದೇಶಕ ರಾಮಜ್ಜ, ಮಲ್ಲಿಕಾರ್ಜುನ್, ನಗರಸಭೆ ನಾಮ ನಿರ್ದೇಶಿತ ಮಾಜಿ ಸದಸ್ಯ ಓಂಕಾರ್, ಶಾರದ ಬ್ರಾಸ್ ಬ್ಯಾಂಡ್‌ನ ಗುರುಮೂರ್ತಿ ಹಾಗೂ ಉತ್ಸವ ಸಮಿತಿಯ ಪದಾಧಿಕಾರಿಗಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

## ನಗರದ ಬೀದಿಗಳಲ್ಲಿ ಬರಗೇರಮ್ಮನ ಮೆರವಣಿಗೆ




**ಚಿತ್ರದುರ್ಗ:** ಗ್ರಾಮ ದೇವತೆ ಬರಗೇರಮ್ಮನವರ ಮೆರವಣಿಗೆ ಶುಕ್ರವಾರ ನಗರದ ಪ್ರಮುಖ ಬೀದಿಗಳಲ್ಲಿ ಸಾಗಿತು. ಬೃಹಧಾಕಾರವಾದ ಹೂವಿನ ಹಾರ, ಬಾದಾಮಿ, ದ್ರಾಕ್ಷಿ, ಚೆರ್ರಿ ಫ್ರೂಟ್, ಖರ್ಜೂರಗಳಿಂದ ಸಿಂಗಾರಗೊಂಡಿದ್ದ ಬರಗೇರಮ್ಮನಿಗೆ ರಸ್ತೆಯುದ್ದಕ್ಕೂ ಭಕ್ತರು ಪೂಜೆ ಸಲ್ಲಿಸಿ ಭಕ್ತಿ ಸಮರ್ಪಿಸಿದರು. ಉರಿ ಬಿಸಿಲಿಗೆ ಕಾದು ಕೆಂಡದಂತಾಗಿದ್ದ ರಸ್ತೆಗೆ ಟ್ರಾಕ್ಟರ್ ಮೂಲಕ ನೀರು ಹರಿಸಲಾಯಿತು. ಉರುಮೆ, ಡೊಳ್ಳು, ಸೋಮನ ಕುಣಿತ, ನಂದಿಕೋಲು, ಚಂಡೆ ವಾದ್ಯ ಇವುಗಳ ಸದ್ದಿಗೆ ಮೆರವಣಿಗೆಯಲ್ಲಿದ್ದ ಸಹಸ್ರಾರು ಯುವಕರು ಕುಣಿದು ಮೆರವಣಿಗೆಯ ಖುಷಿಯನ್ನು ಸಂಭ್ರಮಿಸಿದರು. ಎಸ್.ಎನ್.ರವಿಕುಮಾರ್, ಓಂಕಾರ್ ಇನ್ನು ಅನೇಕ ಪ್ರಮುಖರು ಮೆರವಣಿಗೆಯಲ್ಲಿದ್ದರು.

## ಚಾಲಕ ಮುಂಜಾಗ್ರತೆ : ಬೈಕ್ ಸವಾರ ಹಾಗೂ ಪ್ರಯಾಣಿಕರ ರಕ್ಷಣೆ



» ಚಳ್ಳಕೆರೆ

ಇತ್ತೀಚಿನ ದಿನಗಳಲ್ಲಿ ದ್ವಿಚಕ್ರವಾಹನಗಳ ಸವಾರರು ವೇಗವನ್ನು ನಿಯಂತ್ರಿಸದೆ ರಸ್ತೆಯ ಮೇಲೆ ಚಲಿಸುತ್ತಿದ್ದು, ಇದರಿಂದ ಅಪಘಾತಗಳು ಹೆಚ್ಚಾಗುತ್ತಿವೆ. ಕೆಲವೊಂದು ಸಂದರ್ಭಗಳಲ್ಲಿ ಪ್ರಾಣಾಪಾಯವೂ ಆಗಿದೆ. ಚಳ್ಳಕೆರೆ ನಗರದಿಂದ ಕ್ಯಾತಗೊಂಡನಹಳ್ಳಿ ಕಡೆಗೆ ಚಲಿಸುತ್ತಿದ್ದ ರಾಜ್ಯ ರಸ್ತೆಸಾರಿಗೆ ಸಂಸ್ಥೆ ಬಸ್ ಮೀರಸಾಬಿಹಳ್ಳಿ ಗ್ರಾಮದ ಬಳಿಯ ತಿರುವಿನ ಎದುರಿಗೆ ಬಂದ ಮೋಟಾರ್ ಬೈಕೊಂದು ಬಸ್‌ಗೆ ಅಪ್ಪಳಿಸುವ ಸಂದರ್ಭದಲ್ಲಿ ಅಪಾಯವನ್ನು ಅರಿತ ಬಸ್ ಚಾಲಕ ಓಬಳೇಶ್ ಕೂಡಲೇ ತನ್ನ ವಾಹನವನ್ನು ಬಲಗಡೆ ರಸ್ತೆಯ ಗುಂಡಿಗೆ ಇಳಿಸಿ ಬೈಕ್ ಸವಾರರನ್ನು ಪ್ರಾಣಾಪಾಯದಿಂದ ಪಾರುಮಾಡಿದ್ದಲ್ಲದೆ, ಬಸ್‌ನಲ್ಲಿದ್ದ ಸುಮಾರು 60ಕ್ಕೂ ಹೆಚ್ಚು ಪ್ರಾಯಾಣಿಕ ಪ್ರಾಣ ರಕ್ಷಿಸಿದ್ದಾನೆ. ಸಾರಿಗೆ ಬಸ್ ರಸ್ತೆಯ ಬದಿಯ ಗುಂಡಿಗೆ ಇಳಿದು ನಿಂತಿದ್ದು, ಇನ್ನೂ ಕೆಲವೇ ಅಡಿ ಚಲಿಸಿದಲ್ಲಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ಭಾರಿ ಅನಾಹುತ ಸಂಭವಿಸುತ್ತಿತ್ತು. ಚಾಲಕನ ಸಮಯಪ್ರಜ್ಞೆಗೆ ಸಂತಸ ವ್ಯಕ್ತಪಡಿಸಿದ್ದಾರೆ. ದೊಡ್ಡ ಉಳ್ಳಾರ್ತಿ ಗೋಶಾಲೆ ಬಳಿ ಬಸ್-ಬೈಕ್ ಡಿಕ್ಕಿ :- ಚಳ್ಳಕೆರೆ ಚಿಕ್ಕ ಉಳ್ಳಾರ್ತಿ, ದೊಡ್ಡ ಉಳ್ಳಾರ್ತಿಗೆ ಪ್ರತಿನಿತ್ಯ ಸಾರಿಗೆ ಸಂಸ್ಥೆ ಬಸ್ ಚಲಿಸುತ್ತಿದ್ದು, ಮಧ್ಯಾಹ್ನ ವೇಳೆ ಉಳ್ಳಾರ್ತಿಯಿಂದ ಚಳ್ಳಕೆರೆ ಕಡೆಗೆ ಬರುವಾಗ ಗೋಶಾಲೆ ತಿರುವಿನಲ್ಲಿ ಬೈಕ್‌ಗೆ ಡಿಕ್ಕಿ ಪಡಿಸಿದ ಪರಿಣಾಮವಾಗಿ ಬೈಕ್‌ಸವಾರರಾದ ಚಿತ್ರನಾಯಕನಹಳ್ಳಿ ಗ್ರಾಮದ ಈರಣ್ಣ(42), ವಿರೂಪಾಕ್ಷ(32) ಇಬ್ಬರೂ ಗಾಯಗೊಂಡು ಸಾರ್ವಜನಿಕ ಆಸ್ಪತ್ರೆಗೆಯಲ್ಲಿ ಚಿಕಿತ್ಸೆ ಪಡೆದು ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ದಾಖಲಾಗಿದ್ದಾರೆ. ತಳಕು ಪೋಲೀಸರು ತನಿಖೆ ಮುಂದುವರೆಸಿದ್ದಾರೆ.



## ಪ್ರಮುಖ ಸುದ್ದಿ

# ಪ್ರಜಾಪ್ರಭುತ್ವದ ಅಡಿಪಾಯ ಮತದಾನ, ಮೇ 7 ರಂದು ನಾವೆಲ್ಲರೂ ಮತದಾನ ಮಾಡೋಣ, ಪ್ರತಿಜ್ಞಾವಿಧಿ ಸ್ವೀಕಾರ

» ದಾವಣಗೆರೆ



ಪ್ರಜಾಪ್ರಭುತ್ವದ ಆಶಯಕ್ಕೆ ಮತದಾನ ಅಡಿಪಾಯವಾಗಿದ್ದು, ನಾವೆಲ್ಲರೂ ತಪ್ಪದೇ ಮತದಾನ ಮಾಡುವ ಮೂಲಕ ಸುಭದ್ರ ಸರ್ಕಾರ ರಚನೆಗೆ ಮತ ಚಲಾಯಿಸೋಣ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಹಾಗೂ ಸ್ವೀಪ್ ಸಮಿತಿ ಅಧ್ಯಕ್ಷರಾದ ಸುರೇಶ್ ಬಿ.ಇಟ್ನಾಳ್ ತಿಳಿಸಿದರು.

ಅವರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಸ್ವೀಪ್ ಸಮಿತಿ ವತಿಯಿಂದ ನಗರದ ಖಾಸಗಿ ಬಸ್ ನಿಲ್ದಾಣದಲ್ಲಿ ಶುಕ್ರವಾರ ಸಂಜೆ ಹಮ್ಮಿಕೊಳ್ಳಲಾಗಿದ್ದ ಮೇಣದಬತ್ತಿ ಹಿಡಿದು ಮತದಾನದ ಅರಿವು ಮತ್ತು ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು. ಮೇ.7 ರಂದು ಪ್ರತಿಯೊಬ್ಬ ಮತದಾರರೂ ತಮ್ಮ ಹಕ್ಕು ಚಲಾಯಿಸುವುದಲ್ಲದೇ, ತಮ್ಮ ನೆರೆ ಹೊರೆಯವರಿಗೂ ಮತ ಚಲಾಯಿಸುವಂತೆ ನೋಡಿಕೊಳ್ಳಬೇಕು. ಈಗಾಗಲೇ ಮತದಾರರ ಜಾಗೃತಿಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಯಶಸ್ವಿಗೊಳಿಸಲಾಗಿದೆ. ಮತದಾರರು ಯಾವುದೇ ಆಮಿಷಗಳಿಗೆ ಬಲಿಯಾಗದೇ ಅರ್ಹರಿಗೆ ಮತದಾನ ಮಾಡಬೇಕೆಂದರು. ಚುನಾವಣಾ ಆಯೋಗವು ಎಲ್ಲಾ ಜಿಲ್ಲೆಗಳಲ್ಲಿ ಮತದಾರರ ಜಾಗೃತಿಗೆ ನಡೆದ ಕಾರ್ಯಕ್ರಮಗಳ ಅಪ್‌ಲೋಡ್‌ಗಾಗಿ ವೆಬ್‌ಸೈಟ್ ಮಾಡಿದ್ದು ಅದರಲ್ಲಿ ದಾವಣಗೆರೆ ಜಿಲ್ಲೆಯಲ್ಲಿ ಸುಮಾರೂ 600 ಕ್ಕೂ ಹೆಚ್ಚು ಸ್ವೀಪ್ ಕಾರ್ಯಕ್ರಮ ಮಾಡಿರುವ ದಾಖಲೆಗಳಿವೆ ಎಂದರು. ನಗರದ ಖಾಸಗಿ ಬಸ್ ನಿಲ್ದಾಣದಿಂದ ಅರುಣ ಸರ್ಕಲ್‌ರವರೆಗೆ ಮೇಣದಬತ್ತಿ ಹಿಡಿದು ಜಿಲ್ಲಾ ಮಟ್ಟದ ಅಧಿಕಾರಿಗಳು, ಮಹಾನಗರಪಾಲಿಕೆ ಆರೋಗ್ಯ ನಿರೀಕ್ಷಕರು, ಕಾಲೇಜು ವಿದ್ಯಾರ್ಥಿನಿಯರು ಹಾಗೂ ಸಿಬ್ಬಂದಿಯವರು ಸೇರಿದಂತೆ ಸಾರ್ವಜನಿಕರು ಮೆರವಣಿಗೆ ನಡೆಸಿ ಜಾಗೃತಿ ಮೂಡಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಜಿಲ್ಲಾ ಪಂಚಾಯತ್ ಉಪಕಾರ್ಯದರ್ಶಿ ಕೃಷ್ಣನಾಯ್ಕ, ಉಪವಿಭಾಗಾಧಿಕಾರಿ ದುರ್ಗಶ್ರೀ, ಪಾಲಿಕೆ ಆಯುಕ್ತೆ ರೇಣುಕಾ, ಸ್ವೀಪ್ ಸಮಿತಿಯ ರಾಯಾಭಾರಿ ಪೃಥ್ವಿ ಶಾಮನೂರು, ಜಿ.ಪಂ. ಯೋಜನಾಧಿಕಾರಿ ಮಲ್ಲನಾಯ್ಕ, ಲೀಡ್ ಬ್ಯಾಂಕ್ ಪ್ರಕಾಶ್ ಹಾಗೂ ಜಿಲ್ಲಾಮಟ್ಟದ ಅಧಿಕಾರಿ ಉಪಸ್ಥಿತರಿದ್ದರು.

# 18 ತುಂಬುತ್ತಿರುವ ಸಮಯದಲ್ಲಿ ಮಗನಿಗೆ ತಂದೆಯೊಬ್ಬನ ಬುದ್ಧಿ ಮಾತುಗಳು........



ಕಂದ ನೀನು ಇಂದಿನಿಂದ 18 ವರ್ಷ ತುಂಬಿದ ಕಾರಣಕ್ಕಾಗಿ ಈ ದೇಶದ ಒಬ್ಬ ಪ್ರಜೆಯಾಗಿ ಗುರುತಿಸಿಕೊಳ್ಳಬೇಕಾಗಿದೆ. ಈ ದೇಶದ ಎಲ್ಲಾ ಹಕ್ಕು ಮತ್ತು ಕರ್ತವ್ಯಗಳು ನಿನಗೆ ದೊರೆಯುತ್ತದೆ. ಅಷ್ಟೇ ಅಲ್ಲ ನೀನು ಒಬ್ಬ ಜವಾಬ್ದಾರಿಯುತ ನಾಗರೀಕನು, ಮತದಾರರನ್ನು ಸಹ ಆಗುತ್ತಿರುವೆ......

ಈ ಸಂದರ್ಭದಲ್ಲಿ ಒಬ್ಬ ತಂದೆಯಾಗಿ ನನಗೆ ಒಂದು ಕಡೆ ಹೆಮ್ಮೆ, ಇನ್ನೊಂದು ಕಡೆ ಆತಂಕವಾಗುತ್ತಿದೆ. ಮಗನೇ, ಈ 18 ವರ್ಷಗಳು ನೀನು ನನ್ನ ಕಣ್ಣಳತೆಯ ಮಿತಿಯಲ್ಲಿಯೇ ಬೆಳೆದಿರುವೆ. ಏಕೆಂದರೆ ಮಕ್ಕಳೆಂದರೆ ಅದು ತಂದೆ ತಾಯಿಯ ದೇಹದ ಮುಂದುವರಿದ ಭಾಗ. ಅದಕ್ಕೆ ಎಷ್ಟೇ ಪ್ರತ್ಯೇಕ ಅಸ್ತಿತ್ವವಿದ್ದರೂ ಮೂಲ ಮಾತ್ರ ತಂದೆ ತಾಯಿಯ ದೇಹದ ಮುಂದಿನ ಬೆಳವಣಿಗೆಯಾಗಿಯೇ ಗುರುತಿಸಲ್ಪಡುತ್ತದೆ ಮತ್ತು ಅದು ಅನುವಂಶಿಕವಾಗಿ ಬೆಳೆಯುತ್ತಿರುತ್ತದೆ......

ಇಂತಹ ಸಂದರ್ಭದಲ್ಲಿ ನೀನು ನನ್ನ ಮಗ ಎನ್ನುವುದಕ್ಕಿಂತ ಹೆಚ್ಚಾಗಿ ಇನ್ನು ಮುಂದೆ ನಿಮ್ಮ ಅಪ್ಪ ನಾನಾಗುತ್ತೇನೆ. ನಿನಗೆ ಯೌವ್ವನ ಚಿಗುರುತ್ತಾ ಸಾಗುತ್ತಿದ್ದರೆ, ನನಗೆ ಮುಪ್ಪು ಹತ್ತಿರವಾಗುತ್ತಾ ಇರುತ್ತದೆ. ನಿನ್ನ ಆರೋಗ್ಯ, ದೇಹ, ಮನಸ್ಸು ಬಲಿಷ್ಟವಾಗುತ್ತಿದ್ದರೆ, ನನ್ನ ದೇಹ, ಮನಸ್ಸು, ನಿಧಾನವಾಗಿ ಕುಸಿಯತೊಡಗುತ್ತದೆ. ನಿನ್ನ ನನ್ನ ವಯಸ್ಸಿನ ಅಂತರ ಕೇವಲ ಇಷ್ಟಕ್ಕೆ ನಿಲ್ಲುವುದಿಲ್ಲ. ಈ ನೆಲದ ಸಾಂಸ್ಕೃತಿಕ ವ್ಯಕ್ತಿತ್ವವು ಸಹ ನಮ್ಮಿಬ್ಬರ ಮಧ್ಯೆ ಸಾಕಷ್ಟು ಅಂತರವನ್ನು ಸೃಷ್ಟಿ ಮಾಡಿರುತ್ತದೆ. ನಿನ್ನ ಯೋಚನಾಲಹರಿ, ನನ್ನ ಯೋಚನೆ ಲಹರಿ ಸಾಕಷ್ಟು ಭಿನ್ನವಾಗಿರುವ ಎಲ್ಲ ಸಾಧ್ಯತೆಯೂ ಇರುತ್ತದೆ. ಇದು ವೈಯಕ್ತಿಕ ನಿಲುವುಗಳ ವ್ಯತ್ಯಾಸಗಳಾದರೆ, ಇನ್ನು ಸಾಮಾಜಿಕವಾಗಿ, ಆರ್ಥಿಕವಾಗಿ, ಪ್ರಾಕೃತಿಕವಾಗಿ ಸಾಕಷ್ಟು ವೈರುಧ್ಯಗಳು ನಮ್ಮ ನಡುವೆ ಏರ್ಪಟ್ಟಿದೆ.......

ಕಳೆದ 40/50 ವರ್ಷಗಳಿಗೆ ಹೋಲಿಸಿದರೆ ಗಾಳಿ, ನೀರು, ಆಹಾರ ಸಾಕಷ್ಟು ವಿಷಯುಕ್ತವಾಗಿದೆ. ಅದೇ ಸಮಯದಲ್ಲಿ ಮಾನವೀಯ ಮೌಲ್ಯಗಳು ದುರ್ಬಲವಾಗಿದೆ ಅಥವಾ ವ್ಯಾಪಾರಿಕರಣವಾಗಿದೆ. ಮನುಷ್ಯ ಸಂಬಂಧಗಳು ಮೊದಲಿನಷ್ಟು ಆಳ ಮತ್ತು ಗಟ್ಟಿತನವನ್ನು ಹೊಂದಿಲ್ಲ. ಬದುಕು ಎಂದಿನಂತೆ ಸರಳವಾಗಿಲ್ಲ, ಸಂಕೀರ್ಣವಾಗಿದೆ. ಅವಕಾಶಗಳು, ವೇದಿಕೆಗಳು ಸಂಪರ್ಕಗಳು ಹಿಂದಿನಂತಿಲ್ಲ. ಅದು ಸಾಕಷ್ಟು ಸಾಧ್ಯತೆಗಳನ್ನು ನಿನಗೆ ಕೊಡುತ್ತಿದೆ. ತಂತ್ರಜ್ಞಾನ, ಆಧುನಿಕತೆ ವೇಗವಾಗಿ ಬೆಳೆಯುತ್ತಿದೆ.....

ಇಂತಹ ಸನ್ನಿವೇಶದಲ್ಲಿ ನನ್ನ ಸಲಹೆಗಳು ನಿನಗೆ ಮಾರ್ಗದರ್ಶನವೂ ಆಗಬಹುದು ಅಥವಾ ನಿಯಂತ್ರಿತ ಮಿತಿಗಳು ಆಗಬಹುದು. ಏಕೆಂದರೆ ನನ್ನ ಸಲಹೆಗಳು ನೀನು ನನ್ನ ಮಗ ಎನ್ನುವ ಒಂದು ಮಿತಿಗೆ ಒಳಪಟ್ಟರೆ, ನನಗಾದ ಅನುಭವಗಳು ನಿನ್ನ ಮೇಲೆ ಹೇರಿಕೆಯೂ ಆಗಬಹುದು. ಆದರೂ ತಂದೆ ಎನ್ನುವ ಜವಾಬ್ದಾರಿ ಅರಿತು ಸಾಧ್ಯವಾದಷ್ಟು ನಿನ್ನ ಮನಸ್ಥಿತಿ, ಪರಿಸ್ಥಿತಿಯನ್ನ ಅರಿತು ಕೆಲವು ಸಲಹೆಗಳನ್ನು ಕೊಡಲು ಇಚ್ಚಿಸುತ್ತೇನೆ........

ಈ ವಯಸ್ಸಿನಲ್ಲಿ ಅದು ನಿನಗೆ ಅರ್ಥವಾಗಬಹುದು ಅಥವಾ ಅರ್ಥವಾಗದೆಯೂ ಇರಬಹುದು. ಅದನ್ನು ನೀನು ಸ್ವೀಕರಿಸಬಹುದು ಅಥವಾ ತಿರಸ್ಕರಿಸಬಹುದು ಅಥವಾ ನಿರ್ಲಕ್ಷಿಸಿಬಹುದು. ಆದರೂ ಮುಂದಿನ ದಿನಗಳಲ್ಲಿ ಈ ಸಲಹೆಗಳು ನಿನ್ನ ಉಪಯೋಗಕ್ಕೆ ಬರಬಹುದು ಎಂಬ ಭರವಸೆಯೊಂದಿಗೆ ಹೇಳುತ್ತಿದ್ದೇನೆ......

ಕಂದ, ನನ್ನ ಅಪ್ಪನ ಕಾಲಕ್ಕೆ ಸ್ವಾತಂತ್ರ್ಯ ಆಗತಾನೇ ಬಂದಿತ್ತು. ಅವರಿಗೆ ಕೇವಲ ಏಳು ರೂಪಾಯಿ ಸರ್ಕಾರಿ ಶಿಕ್ಷಕ ವೃತ್ತಿ ಸಿಕ್ಕಿತ್ತು. ನಮ್ಮ ಮನೆಯ ಬಾಡಿಗೆ ಎರಡು ರೂಪಾಯಿಗಳು. ಮಳೆ ಬಂದಾಗ ಮನೆ ತುಂಬಾ ನೀರು ಸೋರುತಿತ್ತು. ಆಗಾಗ ಹಾವು ಚೇಳುಗಳು ಮನೆಯೊಳಗೆ ನುಗ್ಗುತ್ತಿದ್ದವು. ನಮ್ಮ ಸ್ಥಳೀಯ ಆಹಾರದಂತೆ ಮುದ್ದೆಯೆ ನಮ್ಮ ದಿನನಿತ್ಯದ ಹಸಿವನ್ನು ತುಂಬಿಸುತ್ತಿದ್ದ ಭಕ್ಷ ಭೋಜನ. ಆಗಿನ ಕಾಲಕ್ಕೆ ಹಬ್ಬದಲ್ಲಿ ಅನ್ನ ತಿನ್ನುವುದು ಎಂಬುದು ಒಂದು ಗಾದೆ ಮಾತಾಗಿತ್ತು. ಸಿಹಿ ಅಥವಾ ಮಾಂಸಹಾರ ತೀರಾ ಅಪರೂಪ ಮತ್ತು ಅದೇ ಒಂದು ದೊಡ್ಡ ಸಂಭ್ರಮ. ಹೊಸ ಬಟ್ಟೆಗಳು ಯುಗಾದಿ ಹಬ್ಬಕ್ಕೆ ಮಾತ್ರವೇ ಸಿಗುತ್ತಿತ್ತು. ಸ್ನಾನ ಬಹುತೇಕ ವಾರಕ್ಕೆ ಒಂದು ದಿನ, ಅದು ಸಹ ಶನಿವಾರವೇ ಆಗಿರುತ್ತಿತ್ತು.. ಮನೆಯ ಎಲ್ಲರೂ ಒಂದೇ ಚಾಪೆಯಲ್ಲಿ ಒಂದೇ ಕಂಬಳಿಯನ್ನು ಹೊಂದು ಮಲಗುತ್ತಿದ್ದೆವು.......

ಹಸಿವೆಂಬುದು ಸದಾ ಕಾಡುತ್ತಿತ್ತು. ಏಕೆಂದರೆ ಆಗಿನ ದೈಹಿಕ ಚಟುವಟಿಕೆಗೆ ಮನೆಯಲ್ಲಿ ಮಾಡುತ್ತಿದ್ದ ಆಹಾರ ಅಥವಾ ಶಾಲೆಯಲ್ಲಿ ಕೊಡುತ್ತಿದ್ದ ಉಪ್ಪಿಟ್ಟು ಸಾಕಾಗುತ್ತಿರಲಿಲ್ಲ. ಎಲ್ಲೋ ಮದುವೆಯೋ ಅಥವಾ ಊರಿನ ಜಾತ್ರೆಯೋ ನಡೆದರೆ ಅಲ್ಲಿ ಸಿಗುತ್ತಿದ್ದ ಆಹಾರವೇ ನಮಗೆ ಮೃಷ್ಟಾನ್ನ.....

ಆಗ ನಮ್ಮ ತಂದೆಯವರ ಆದ್ಯತೆ ನಮ್ಮ ಮಕ್ಕಳನ್ನ ಕನಿಷ್ಠ ಎಸ್ ಎಸ್ ಎಲ್ ಸಿ ಅಥವಾ ಪಿಯುಸಿ ಸಾಧ್ಯವಾದರೆ ಒಂದು ಪದವಿಯನ್ನು ಮಾಡಿಸಿ, ಏನಾದರೂ ಸರ್ಕಾರಿ ಉದ್ಯೋಗ ಸಿಕ್ಕಿ, ಮಗ ನಗರದಲ್ಲಿ ಸ್ವತಂತ್ರ ಜೀವನ ಸಾಗಿಸಿದರೆ ಸಾಕು ಎಂದು ತುಂಬಾ ಆಸೆ ಪಡುತ್ತಿದ್ದರು.



ಕೃಷಿ ಅಥವಾ ಖಾಸಗಿ ವ್ಯವಹಾರ ಅಷ್ಟೇನೂ ಲಾಭದಾಯಕವಾಗಿರಲಿಲ್ಲ. ಅದರಿಂದ ಇವನ ಬದುಕು ಸಾಗುವುದು ಕಷ್ಟ. ಸರ್ಕಾರಿ ಉದ್ಯೋಗ ದೊರಕಿದರೆ ಜೀವನಕ್ಕೆ ಶಾಶ್ವತವಾಗಿ ಒಂದು ದಾರಿ ಆಗುತ್ತದೆ ಎಂಬ ಆಸೆ ಅವರದಾಗಿತ್ತು....

ಮಗನೇ ಈಗ ಕಾಲ ಅಥವಾ ಸಾಮಾಜಿಕ ವಾತಾವರಣ ಸಂಪೂರ್ಣ ಬದಲಾಗಿದೆ. ಅಂದು ನಾನು ನಗರಕ್ಕೆ ಬಂದು ಸಾಕಷ್ಟು ಸಂಘರ್ಷಗಳ ನಡುವೆ ಪ್ರತಿಕ್ಷಣ ಶ್ರಮ ಪಡುತ್ತಾ ಜವಾಬ್ದಾರಿಯಿಂದ ಬದುಕು ನಿರ್ವಹಿಸಲು ತುಂಬಾ ಕಷ್ಟವಾಯಿತು. ಹೇಗೋ ಒಂದು ಹಂತ ತಲುಪಿದ ಮೇಲೆ ನೀನು ಜನಿಸಿದೆ. ಆಗ ನನ್ನೆಲ್ಲಾ ಕಷ್ಟಗಳು ನಿನಗೆ ಬಾಧಿಸದಿರಲೆಂದು ನಿನ್ನನ್ನು ಹೆಚ್ಚು ಪ್ರೀತಿಯಿಂದ ಯಾವುದೇ ನೋವಾಗದಂತೆ, ನೀನು ಕಷ್ಟ ಪಡದಂತೆ ಸಾಕಬೇಕೆಂದು ಬಯಸಿ ಹಾಗೆಯೇ ನೋಡಿಕೊಳ್ಳುತ್ತಿದ್ದೆ. ನೀನು ಗಣಿತದ ಲೆಕ್ಕಗಳು ಹೇಳು, ನಾನು ಕೂಡಿ ಕಳೆದು ಗುಣಿಸುವುದು ಮಾಡುತ್ತೇನೆ ಎಂದಾಗ, ನಾನು ಅತ್ಯಂತ ಸರಳ ಸಂಖ್ಯೆಗಳನ್ನು ಕೊಡುತ್ತಿದ್ದೆ. ಏಕೆಂದರೆ ಸಂಕೀರ್ಣ ಸಂಖ್ಯೆಗಳನ್ನು ನೀಡಿದರೆ ನೀನು ಎಲ್ಲಿ ಕಷ್ಟ ಪಡುತ್ತಿಯೋ ಎನ್ನುವಷ್ಟು ತೀವ್ರವಾಗಿ ನಿನ್ನನ್ನು ಪ್ರೀತಿಸುತ್ತಿದ್ದೆ......

ಆದರೆ ಜಾಗತೀಕರಣದ ನಂತರ ಬದುಕು ಅಷ್ಟು ಸುಲಭವಾಗಿ ಮುನ್ನಡೆಯಲು ಸಾಧ್ಯವಾಗುತ್ತಿಲ್ಲ. ಅನೇಕ ಎರಡು ತೊಡರುಗಳು, ಆರ್ಥಿಕ ಸಂಕಷ್ಟಗಳು ನನ್ನನ್ನು ಕಾಡಲು ಪ್ರಾರಂಭಿಸಿದೆ. ಇಂತಹ ಸಂದರ್ಭದಲ್ಲಿ ನೀನು ಈಗಿನ ಸಾಮಾಜಿಕ ಪರಿಸ್ಥಿತಿಯಲ್ಲಿ ದೊಡ್ಡ ದೊಡ್ಡ ಕನಸುಗಳನ್ನು, ಯಶಸ್ಸನ್ನು ಬಯಸುತ್ತಿರುವೆ. ನನ್ನ ದೃಷ್ಟಿಕೋನದ ಯಶಸ್ಸಿಗೂ, ನಿನ್ನ ದೃಷ್ಟಿಕೋನದ ಯಶಸ್ಸಿಗೂ ಸಾಕಷ್ಟು ವ್ಯತ್ಯಾಸ ಇದೆ. ಕೇವಲ ವೈಯಕ್ತಿಕ ನೆಲೆಯಲ್ಲಿ ಮಾತ್ರವಲ್ಲ ಸಾಮಾಜಿಕವಾಗಿ ಸಹ ಇಂದು ವಸ್ತು ಸಂಸ್ಕೃತಿ, ಕೊಳ್ಳುಬಾಕ ಸಂಸ್ಕೃತಿ, ಹೋಲಿಕೆಯ ಸಂಸ್ಕೃತಿ, ಅಪ ಮೌಲ್ಯಗೊಂಡ ಸಂಸ್ಕೃತಿ, ನಿನ್ನನ್ನು ಅಕ್ರಮಿಸಿಕೊಂಡಿವೆ. ಕಾಲದ ಪಯಣದಲ್ಲಿ ಈ ಬದಲಾವಣೆಗಳು ಸಹಜವೇನೋ ನಿಜ. ಆದರೆ ಆ ಬದಲಾವಣೆಗಳು ನಿನ್ನ ಭವಿಷ್ಯವನ್ನು ಮುಸುಕಾಗಿಸಬಹುದು, ಈ ವ್ಯವಸ್ಥೆ ಇನ್ನೂ ಸಂಕೀರ್ಣ ಸಂಘರ್ಷಮಯವಾಗಿ ನಿನ್ನ ನೆಮ್ಮದಿಯನ್ನು ಕಸಿದುಕೊಳ್ಳಬಹುದು, ನಿನ್ನ ಆರೋಗ್ಯವನ್ನು ಹಾಳುಮಾಡಬಹುದು ಎಂಬ ಆತಂಕ ಇರುವುದಂತೂ ನಿಜ......

ಬಹುಶಃ ಹಿಂದೆ ನಮ್ಮ ತಂದೆ ತಾಯಿಗಳು ಇದೇ ರೀತಿ ಆತಂಕ ಪಟ್ಟಿರಬಹುದು. ಮುಂದಿನ ಭವಿಷ್ಯ ಹೇಗಾಗುತ್ತದೋ ತಿಳಿದಿಲ್ಲ. ಆದರೆ ಈ ಕ್ಷಣದಲ್ಲಿ ಯೋಚಿಸಿದಾಗ ಮುಂದಿನ ದಿನಗಳು ನೀನು ತಿಳಿದಿರುವುದಕ್ಕಿಂತ ಹೆಚ್ಚು ಸವಾಲುಗಳನ್ನು ನೀಡಬಹುದು ಎಂದು ಅನಿಸುತ್ತಿದೆ. ಮಗನೇ, ಇಂದು ಜಗತ್ತು ತುಂಬಾ ಸ್ಪರ್ಧಾತ್ಮಕವಾಗಿದೆ. ಹಾಗೆಯೇ ಮನುಷ್ಯ ಸಂಬಂಧಗಳು ಶಿಥಿಲವಾಗಿ, ಹಣ ಕೇಂದ್ರೀಕೃತವಾಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಲ್ಲ. ಇದರಿಂದಾಗಿ ದೇಹ, ಮನಸ್ಸುಗಳು ಸಾಕಷ್ಟು ಒತ್ತಡಕ್ಕೆ ಸಿಲುಕುತ್ತವೆ. ಬಹುತೇಕ ಯಶಸ್ಸಿಗಿಂತ ನಿರಾಸೆಗಳು, ಅಸಹಾಯಕತೆಗಳೇ ಮನೆಮಾಡುತ್ತವೆ.....

ಸಾಮೂಹಿಕ ಯಶಸ್ಸನ್ನು ಯಾರು ಬಯಸುತ್ತಿಲ್ಲ. ಕೆಲವೇ ಕೆಲವರ ವೈಯಕ್ತಿಕ ಯಶಸ್ಸು ಸಮಾಜದಲ್ಲಿ ಅಂತರವನ್ನು ಹೆಚ್ಚಿಸುತ್ತಿದೆ. ಹಂಚಿಕೊಂಡು ತಿನ್ನುವ ಪರಿಸ್ಥಿತಿ ಮಾಯವಾಗಿ ಕಿತ್ತುಕೊಂಡು ತಿನ್ನುವ ಅನಾಗರಿಕ ವರ್ತನೆಗಳು ಸಮಾಜದಲ್ಲಿ ಸಹಜವಾಗುತ್ತಿವೆ. ಇಂತಹ ಸನ್ನಿವೇಶದಲ್ಲಿ ನಾನು ಗೊಂದಲಕ್ಕೆ ಒಳಗಾಗಿದ್ದೇನೆ......

ಒಳ್ಳೆಯದು ಒಳ್ಳೆಯದಾಗಿಯೇ ಇಲ್ಲದಿರುವಾಗ, ಒಳ್ಳೆಯವರು ಬದುಕುವುದೇ ಕಷ್ಟವಾಗುತ್ತಿರುವಾಗ, ಕೆಟ್ಟವರು ಸಮಾಜದಲ್ಲಿ ವಿಜೃಂಭಿಸುತ್ತಿರುವಾಗ, ಕೆಟ್ಟವರೇ ಜನಪ್ರಿಯತೆ, ವ್ಯಾವಹಾರಿಕ ಯಶಸ್ಸನ್ನು ಪಡೆಯುತ್ತಿರುವಾಗ, ಅದರ ಸಂಪೂರ್ಣ ವಿವರಗಳು ನನಗೆ ಸ್ಪಷ್ಟವಾಗಿ ತಿಳಿದಿರುವಾಗ, ನಾನು ನಿನಗೆ ಏನೆಂದು ಮಾರ್ಗದರ್ಶನ ಮಾಡಬೇಕು. ಸತ್ಯ, ಪ್ರಾಮಾಣಿಕ, ನಿಷ್ಠೆ, ಮಾನವಿಯ ಮೌಲ್ಯಗಳನ್ನು ನಿನಗೆ ಭೋದಿಸಬೇಕೇ ಅಥವಾ ಸಾಂದರ್ಭಿಕವಾಗಿ ಏನನ್ನಾದರೂ ಮಾಡಿ ಜೀವನದಲ್ಲಿ ಯಶಸ್ಸನ್ನು ಪಡೆ ಎಂದು ಹೇಳಬೇಕೇ ಈ ಎರಡರ ನಡುವೆ ನನಗೂ ಗೊಂದಲಗಳಿವೆ.....

ಏಕೆಂದರೆ ಒಳ್ಳೆಯದನ್ನು ಹೇಳುವುದು ತುಂಬಾ ಸುಲಭ. ಆದರೆ ಅದನ್ನು ಅನುಸರಿಸುವ ಮನಸ್ಥಿತಿ ನಿನ್ನದಾಗಿದ್ದರೆ ತುಂಬಾ ಸಂತೋಷ. ಇಲ್ಲದಿದ್ದರೆ ಆ ಸೂತ್ರಗಳು ನಿನ್ನ ಅಪ ಯಶಸ್ಸಿಗೆ ಕಾರಣವಾಗಿ ಅದರ ಹೊಣೆಗಾರ ನಾನಾಗುತ್ತೇನೇನೋ ಎನ್ನುವ ಅಳುಕು ಸಹ ನನಗಿದೆ. ಅಂದಿನ ಆ ಸಾಮಾಜಿಕ ವಾತಾವರಣ ಮಾಯವಾಗಿದೆ. ಸಕ್ಸಸ್ ಅಟ್ ಎನಿಕಾಸ್ಟ್ ಎನ್ನುವ ಸೂತ್ರ ಈಗ ಚಲಾವಣೆಯಲ್ಲಿದೆ. ಒಳ್ಳೆಯ ಮಾರ್ಗದಲ್ಲಿ ಯಶಸ್ವಿಯಾಗಿ ಮುನ್ನಡೆ ಎಂದು ಧೈರ್ಯವಾಗಿ ಹೇಳುವ ಸ್ಥಿತಿಯಲ್ಲಿ ನಾನಿಲ್ಲ. ಹಾಗೆಂದು ಕೆಟ್ಟವನಾಗು ಎನ್ನುವುದು ಮತ್ತಷ್ಟು ತಪ್ಪಾಗುತ್ತದೆ....

ಮಗನೇ ನಾನೇನೋ ವ್ಯಾವಹಾರಿಕ ಜಗತ್ತಿನಿಂದ ಹೊರಬಂದು ಸಾಮಾಜಿಕ ಪರಿವರ್ತನೆಗಾಗಿ ಯಾವ ನಿರೀಕ್ಷೆಯು ಇಲ್ಲದೆ ಕೆಲಸ ಮಾಡುತ್ತಿದ್ದೇನೆ. ಹಾಗೆಂದು ನಿನ್ನನ್ನು ನಿರ್ಲಕ್ಷಿಸಲು ಸಾಧ್ಯವಾಗುತ್ತಿಲ್ಲ ಅಥವಾ ನಿನಗಾಗಿಯೇ ನನ್ನ ಬದುಕನ್ನು ಸವೆಸಲು ಸಾಧ್ಯವಾಗುತ್ತಿಲ್ಲ. ನನ್ನ ಮಗ ಮತ್ತು ಈ ಸಮಾಜದ ಆಯ್ಕೆಯಲ್ಲಿ ಅನಿವಾರ್ಯವಾಗಿ ಸಮಾಜವನ್ನೇ ಆಯ್ಕೆ ಮಾಡಿಕೊಂಡಿದ್ದೇನೆ. ಇದರ ನಡುವೆ ನಿನ್ನನ್ನು ಸರಿಯಾಗಿ ಬೆಳೆಸದ ಆರೋಪ ನನ್ನ ಮೇಲೆ ಸಹಜವಾಗಿಯೇ ಬರುತ್ತದೆ.....

ಒಬ್ಬ ಮಗನಿಗಾಗಿ ಹೆಚ್ಚು ಶ್ರಮಪಡಲು ಅಥವಾ ಮಗನ ಬದುಕನ್ನು ನಿರ್ಲಕ್ಷಿಸಿ ಅಥವಾ ಸವಾಲಿಗೆ ಒಡ್ಡಿ ಇಡೀ ಸಮಾಜದ ಪರಿವರ್ತನೆಗಾಗಿ ಪ್ರಯತ್ನಿಸುವ ಆಯ್ಕೆಯಲ್ಲಿ ಸಮಾಜವನ್ನೇ ಆಯ್ಕೆ ಮಾಡಿಕೊಂಡಿರುವ ಬಗ್ಗೆ ನನಗೆ ಆತ್ಮ ತೃಪ್ತಿ ತಂದಿದೆ. ಇದರ ನಡುವೆ ನೀನು 18 ದಾಟುತ್ತಿದ್ದೀಯಾ. ನಿನ್ನ ಬೇಡಿಕೆಗಳು ಇಂದಿನ ಎಲ್ಲ ಸಾಮಾನ್ಯ ಯುವ ಜನಾಂಗದಂತೆ ಸಾಕಷ್ಟು ಕನಸುಗಳನ್ನು ಹೊಂದಿವೆ. ಕರುಳ ಬಳ್ಳಿಯ ಮೂಲೆಯಲ್ಲಿ ನಿನ್ನ ಆಸೆಗಳಿಗೆ ಸ್ಪಂದಿಸಬೇಕೆಂದು ಸಾಕಷ್ಟು ಮನಸ್ಸು ಕಾಡುತ್ತದೆ. ಅದಕ್ಕಾಗಿ ಸಣ್ಣ ಪ್ರಯತ್ನಗಳು ಇದೆ. ಆದರೆ ಅದನ್ನು ನಿರ್ವಹಿಸಲು ಸಾಧ್ಯವಾಗುತ್ತಿಲ್ಲ ಅದಕ್ಕಾಗಿ ಕ್ಷಮೆ ಇರಲಿ......

ಹೇಳಲು ಇನ್ನೂ ಸಾಕಷ್ಟು ಇದೆ. ಆದರೆ ನನ್ನ ಬುದ್ಧಿಮಾತುಗಳು ಇವತ್ತಿಗೆ ಮಾತ್ರ ಮುಗಿಯುವುದಿಲ್ಲ. ಅದು ನಿರಂತರ. ಕೊನೆಯದಾಗಿ ಒಂದು ಕಿವಿಮಾತು ಮಗನೇ, ನೀನು ಸುಖವಾಗಿ, ನೆಮ್ಮದಿಯಿಂದ, ಸಂತೋಷವಾಗಿ ಇರುವಾಗ ನನ್ನ ನೆನಪಾಗದಿದ್ದರೂ ಚಿಂತೆ ಇಲ್ಲ. ನನ್ನ ಮುಪ್ಪಿನ ಸಮಯದಲ್ಲಿ ನೀನು ನನಗೆ ನೆರವಾಗದಿದ್ದರೂ ಪರವಾಗಿಲ್ಲ. ಆದರೆ ನಿನ್ನ ಸಂಕಷ್ಟದ ಸಮಯದಲ್ಲಿ. ನಿನ್ನ ನೋವಿನ ಸಂದರ್ಭದಲ್ಲಿ, ನನ್ನ ನೆನಪಾದರೆ ಅಷ್ಟೇ ಸಾಕು. ನಾನು ಬದುಕಿದ್ದರೆ ನಿನಗೆ ಸಹಾಯವನ್ನು, ಸಲಹೆ ಸೂಚನೆಯನ್ನು ನೀಡುತ್ತೇನೆ. ಇಲ್ಲದಿದ್ದರೆ ನನ್ನ ಈ ತಿಳುವಳಿಕೆಯ ಮಾತುಗಳಾದರು ನಿನಗೆ ನೆನಪಾಗಲಿ....

ಒಳ್ಳೆಯದಾಗಲಿ ಮಗ..... ಪ್ರಬುದ್ಧ ಮನಸ್ಸು ಪ್ರಭುದ್ಧ ಸಮಾಜ, ಜನರ ಜೀವನಮಟ್ಟ ಸುಧಾರಣೆಯ ಗುರಿಯೊಂದಿಗೆ, ಮನಗಳಲ್ಲಿ, ಮನೆಗಳಲ್ಲಿ, ಮತಗಳಲ್ಲಿ, ಪರಿವರ್ತನೆಗಾಗಿ, ಮನಸ್ಸುಗಳ ಅಂತರಂಗದ ಚಳವಳಿ,

» **ಲೇಖನ**
**ವಿವೇಕಾನಂದ.**
**ಹೆಚ್.ಕೆ. 9844013068**

Printed by: GOVINDAPPA.T Published by: DARSHAN.T Owned by: DARSHAN.T and Printed at: ASHAYA PRINTERS No.94, C.M.C. Colony, Yangammana Katte, Chitradurga-577 501, Chitradurga Dist, Karnataka state. Published at : No. 55 Ingaladal Main Street, Near Canara Banak , Ingaladal Village, Ingaladal Post - 577524, Chitradurga Tq, Chitradurga Dist, Karnataka state. Editor : DARSHAN.T